ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಮಾರ್ಚ್ 2021 ಮಾಸ ಪತ್ರಿಕೆ

ಸಂಪುಟ/Volume : 43
ಸಂಚಿಕೆ/Issue : 6
ಪುಟ/Pages : 12
ಬೆಲೆ/Price : ₹ 10/-

Akhila Karnataka Shikshaka Samachar | February 2021 | Monthly

## ಪ್ರೇರಕ ಶಕ್ತಿ ನೀಡುವ ಸಾಧಕಿಯರು






## ಪ್ಲವ ನಾಮ ಸಂವತ್ಸರದ ಶುಭಾಶಯಗಳು

A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

# ಹೊಸ ಚಿಗುರು ಹಳೆ ಬೇರು

**ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು ।**
**ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ ॥**
**ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ,**
**ಜಸವು ಜನಜೀವನಕೆ – ಮಂಕುತಿಮ್ಮ ॥**

ಶಿಕ್ಷಕ ಸಮಾಚಾರವು ಕಳೆದೆರೆಡು ತಿಂಗಳನಿಂದ ಈ ತತ್ವದೊಂದಿಗೆ ಮುದ್ರಣಗೊಳ್ಳುತ್ತಿರುವುದು ತಮಗೆಲ್ಲರಿಗೂ ತಿಳಿದ ವಿಷಯವೇ. ನಾವು ಹೀಗಾಗಬಹುದೇ, ಭಾರತ ಪರಿಚಯ, ವಿದ್ಯಾರ್ಥಿ ಜ್ಞಾನ ಮಿತ್ರ ಮುಂತಾದ ಹೊಸ–ಹೊಸ ಚಿಗುರೊಡೆದ ಪುಟಗಳೊಂದಿಗೆ, ಹಳೇ ತತ್ವದೊಂದಿಗೆ ತಮ್ಮ ಮುಂದೆ ಪ್ರಸ್ತುತವಾಗುತ್ತಿದೆ. ಚೈತ್ರ ಮಾಸ ಪ್ರಾರಂಭವಾಗಿ, ಹೊಸ ಚಿಗುರು ಬಂದಾಗ ನಾವೆಷ್ಟೇ ಬೇಡವೆಂದರೂ ನಮ್ಮ ಕಣ್ಣು ಹಾಗೂ ಮನ ಆ ಹೊಸತನ್ನು ಅನುಭವಿಸುತ್ತಾ ಆಹ್ಲಾದಿಸಲಾರದೇ ಇರಲಾರದು. ಹಾಗೆಯೇ ನಮ್ಮ ಹೊಸ ಹೊಸ ಚಿಗುರು ಪುಟಗಳು ತಮಗೆ ಹೇಗನ್ನಿಸುತ್ತಿವೆ? ಎಂಬುದನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ ನಮಗೆ. ನಿಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದರೊಂದಿಗೆ ನಮ್ಮ ಹೊಸತನಕ್ಕೆ ಪ್ರೋತ್ಸಾಹಿಸುವಿರೆಂಬ ನಂಬಿಕೆ ನಮಗೆ. ನಮ್ಮ ಈ–ಮೇಲ್ ವಿಳಾಸ kssta55@gmail.com ಕ್ಕೆ ಒಂದು ಪತ್ರ ಬರೆದು ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳುವಿರಿ ಎಂದು ಕಾಯುತ್ತಿದೆ ನಮ್ಮ ಶಿಕ್ಷಕ ಸಮಾಚಾರದ ತಂಡ.

---

### ಆರೋಗ್ಯಯುತ ಸಮಾಜ ಸ್ಥಾಪನೆ ಪ್ರತಿಯೊಬ್ಬ ನಾಗರಿಕನ ಕರ್ತವ್ಯ

ನಿಮಗೆಲ್ಲಾ ತಿಳಿದಂತೆ ಕಳೆದ ಒಂದು ವರ್ಷದಿಂದ ನಾವೆಲ್ಲಾ ಎಂತಹ ಕಷ್ಟದ ಸಮಯವನ್ನು ಕಳೆಯುತ್ತಿದ್ದೇವೆ. ಈ ಎಲ್ಲಾ ಕಷ್ಟಗಳಿಗೆ ಒಂದು ಕೊನೆ ಹಂತ ಬಂದಿತೆಂದು ತಿಳಿಯುತ್ತಿರುವುದರೊಳಗೆ ಕೊರೋನಾ ಎರಡನೇ ಅಲೆ ಪ್ರಾರಂಭವಾಗುತ್ತಿದೆ. ಮೊದಲಾದರೆ ಲಸಿಕೆ ಸಿಗುತ್ತಿಲ್ಲವಲ್ಲ ಎಂಬ ಕೊರಗು ಕಾಡುತ್ತಿತ್ತು. ಆದರೆ ಈಗ ಹಾಗೇ ಇಲ್ಲ. ಅರ್ಹರು ಲಸಿಕೆಯನ್ನು ಆದಷ್ಟು ಬೇಗ ಪಡೆಯಬೇಕು ಮತ್ತು ಸಾಮಾಜಿಕ ಅಂತರವನ್ನು ಕಾಪಾಡುತ್ತಾ, ಮಾಸ್ಕನ್ನು ಉಪಯೋಗಿಸಿ, ಸ್ಯಾನಿಟೈಜರ್ ಉಪಯೋಗಿಸುವುದರೊಂದಿಗೆ ಅವಶ್ಯಕತೆ ಹಾಗೂ ಅನಿವಾರ್ಯವಾದರೆ ಮಾತ್ರ ಹೊರಗೆ ಹೋಗುತ್ತಾ ಎಲ್ಲರೂ ಆರೋಗ್ಯದಿಂದಿದ್ದರೆ ಮಾತ್ರ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುತ್ತಾ ದೇಶವನ್ನು ಅಭಿವೃದ್ಧಿಯತ್ತ ಕರೆದುಕೊಂಡು ಹೋಗಬಹುದಲ್ಲವೇ?

ಶಿಕ್ಷಕರಾದ ನಾವು ವಿದ್ಯಾರ್ಥಿಗಳಿಗೆ ಈ ಮಾಹಿತಿಗಳನ್ನು ನೀಡುವುದರೊಂದಿಗೆ ವಿಶ್ವದಲ್ಲಿಯೇ ಭಾರತ ದೇಶವನ್ನು ಮಾದರಿಯಾಗಿ ಮಾಡಬಹುದು.

---

### ಮಹಾಸಂಪರ್ಕ ಅಭಿಯಾನ

ದಿನಾಂಕ 17.03.2021 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಸದಸ್ಯತಾ ಅಭಿಯಾನವನ್ನು ಕೈಗೊಂಡಿದ್ದು, ಅದನ್ನು ಸಫಲಗೊಳಿಸಿದ ಕೀರ್ತಿ ನಮ್ಮೆಲ್ಲಾ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಿಗೆ ಸಲ್ಲಬೇಕು. ಅತ್ಯುತ್ಸಾಹದಿಂದ ಭಾಗವಹಿಸಿದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರಿಗೆ ಅಭಿನಂದನೆಗಳು. ಹೊಸದಾಗಿ ಸದಸ್ಯರಾದ ನಮ್ಮ ಬಂಧುಗಳಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಅತ್ಯಂತ ಆತ್ಮೀಯತೆಯಿಂದ ಸ್ವಾಗತವನ್ನು ಕೋರುತ್ತದೆ.

ನಮ್ಮೆಲ್ಲ ಆತ್ಮೀಯ ಓದುಗರಿಗೆ ಪ್ಲವ ನಾಮ ಸಂವತ್ಸರದ ಶುಭಾಶಯಗಳು. ಪ್ಲವ ನಾಮ ಸಂವತ್ಸರವು ಮಾನವ ಕುಲಕೆ ಆರೋಗ್ಯವನ್ನು ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸೋಣ.

ಸಂಪಾದಕ



ನಮ್ಮ ಪೂರ್ವಿಕರು ಶ್ರೇಷ್ಠರಾಗಿದ್ದರು ಮತ್ತು ಇಡೀ ಜಗತ್ತಿನ ಗೌರವವನ್ನು ಸಂಪಾದಿಸಿದ್ದರು ; ಇದಕ್ಕೆ ಕಾರಣ ಅವರಿಗೆ ತನ್ನ ಉಚ್ಚ ರಾಷ್ಟ್ರೀಯ ಆದರ್ಶಗಳ ಮತ್ತು ರಾಷ್ಟ್ರದ ಆತ್ಮ ಗೌರವದ ಅರಿವು ಇದ್ದೀತೆಂಬುದು.

– ಡಾ. ಹೆಡಗೇವಾರ್, 1889-1940

## ಪರಿವಿಡಿ


- ನಾವೂ ಸಾಧಕಿಯರಾಗಬಹುದೇ? 3
- ಪರೀಕ್ಷೆ : ಒಂದು ಪ್ಲಾನ್ ಹಾಕೋಣ ಬನ್ನಿ 5
- ನಾವೂ ಹೀಗಾಗಬಹುದೇ? 6
- ರಾಷ್ಟ್ರೀಯ ಶಿಕ್ಷಣ ನೀತಿ– ಒಂದು ವಿಚಾರ ಸಂಕಿರಣ 7
- ಗುರು–ಶಿಷ್ಯ 8
- ಪ್ರಿಪರೇಟರಿ ಪರೀಕ್ಷೆ ಎದುರಿಸುವಾಗಿನ ಮನೋಭಾವ 9
- ಭಾರತ ಪರಿಚಯ 10
- ಸಂಘದ ಸದಸ್ಯತ್ವ ಅಭಿಯಾನ 11
- ರಾಷ್ಟ್ರೀಯ ಕಾರ್ಯಕಾರಿಣಿ ವರದಿ 10

# ನಾವೂ ಸಾಧಕಿಯರಾಗಬಹುದೇ?




**ಆರ್. ಸೀತಾಲಕ್ಷ್ಮಿ**
**ಮಾರ್ಗದರ್ಶಕರು,**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**


**ಪ್ರೀತಿಯ ವಿದ್ಯಾರ್ಥಿನಿ,**

ಶುಭ ಹಾರೈಕೆಗಳು. ಇದೇ ಮಾರ್ಚ್ 8ನೇ ತಾರೀಖು "ಅಂತರರಾಷ್ಟ್ರೀಯ ಮಹಿಳಾ ದಿನ" ಎಲ್ಲೆಡೆ ಆಚರಿಸಲ್ಪಡುತ್ತದೆ, ನಿನಗೂ ಗೊತ್ತಿರಬಹುದು. ಇದಕ್ಕೆ ಕಾರಣ ಪಾಶ್ಚಾತ್ಯ ದೇಶಗಳಲ್ಲಿ ಹಲವು ಶತಮಾನಗಳವರೆಗೆ ಮಹಿಳೆಯರಿಗೆ ಮತದಾನದ ಹಕ್ಕೇ ಇರಲಿಲ್ಲ. ಆ ಕಾಲದಲ್ಲಿ ಮಹಿಳೆಗೆ ಸೂಕ್ತ ಸ್ಥಾನಮಾನ ನೀಡಬೇಕೆಂದು ಚಳುವಳಿ, ಹೋರಾಟಗಳು ನಡೆದು ಕೊನೆಗೂ ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಪ್ರಾತಿನಿಧ್ಯ ದೊರೆಯಿತು. ನಮ್ಮ ದೇಶದಲ್ಲಾದರೂ ಮಹಿಳೆಗೆ ಅನಾದಿಕಾಲದಿಂದಲೂ ಮಾತೃತ್ವದ ಸ್ಥಾನವನ್ನೇ ನೀಡಿ ಪುರಸ್ಕರಿಸಿದ್ದಾರೆ. ಕೇವಲ ಹೆಣ್ಣಿಗೆ ಮಾತ್ರವಲ್ಲ ಜಡವಸ್ತುಗಳಿಗೂ! ನದಿಗಳಿಗೆ ಗಂಗಾಮಾತೆ, ಕಾವೇರಿ ಮಾತೆ ಎನ್ನುತ್ತೇವೆ. ಪಶುಗಳನ್ನು ಗೋಮಾತೆಯಾಗಿ ಗೌರವಿಸುತ್ತೇವೆ. ಬರೀ ಅಷ್ಟೇ ಅಲ್ಲ, ಪ್ರಕೃತಿಯನ್ನೂ ಪ್ರಕೃತಿಮಾತೆ ಎಂದು ಪೂಜಿಸುತ್ತೇವೆ, ಆರಾಧಿಸುತ್ತೇವೆ. ಭಾರತೀಯ ಸಂಸ್ಕೃತಿಯಲ್ಲಿ ಒಬ್ಬ ಪುರುಷನು ದಾನಮಾಡುವಾಗ ತನ್ನ ಅರ್ಧಾಂಗಿ ಒಂದುದ್ಧರಣೆ ನೀರನ್ನು ದಾನ ನೀಡುವ ಪದಾರ್ಥಗಳ ಮೇಲೆ ಹಾಕಿ ಸಮ್ಮತಿ ಸೂಚಿಸಿದಾಗಲೇ ಆ ದಾನಕ್ಕೆ ಬೆಲೆ. ಇದಲ್ಲದೆ ನಮಲ್ಲಿ ಮಹಿಳಾ ಸಾಧಕಿಯರ ಸಂಖ್ಯೆಯೇನೂ ಕಡಿಮೆಯಿಲ್ಲ.

ಭಾರತದಲ್ಲಿ ಅಂದಿನಿಂದ ಇಂದಿನವರೆಗೆ ಮಹಿಳಾ ಸಾಧಕಿಯರ ಒಂದು ಸರಮಾಲೆಯೇ ಇದೆ. ಆದರೆ ನಾನೀಗ ಕಳೆದು 20 ವರ್ಷಗಳಲ್ಲಿ ಸಾಧನೆ ಮಾಡಿದ ನಾಲ್ವರು ಸಾಧಕಿಯರ ಬಗ್ಗೆ ತಿಳಿಸಿಕೊಡುತ್ತೇನೆ.

ಈ ಒಂದು ಪತ್ರದಲ್ಲಿ ಎಲ್ಲರನ್ನೂ ಉಲ್ಲೇಖಿಸುವುದು ಅಸಾಧ್ಯ. ಆದರೆ ಕೆಲವರನ್ನಾದರೂ ನಿಮಗೆ ಪರಿಚಯಿಸಿದರೆ ನಿನ್ನ ಮನಸ್ಸಿನಲ್ಲಿ ನಾನೂ ಅವರಂತಾಗಬಾರದೇಕೆ? ಎಂಬ ಪ್ರಶ್ನೆಯು ಕಾಡಿದರೆ ನಿನ್ನನ್ನು ಉದ್ದೇಶಿಸಿ ಬರೆದ ಈ ಪತ್ರ ಸಾರ್ಥಕವಾದೀತು.



27 ಅಕ್ಟೋಬರ್ 1993ರಲ್ಲಿ ಮಧ್ಯಪ್ರದೇಶದ ರೇವಾ ಜಿಲ್ಲೆಯಲ್ಲಿ ಅವನಿ ಚತುರ್ವೇದಿ ಜನಿಸಿದಳು. ಭಾರತದ ಯುದ್ಧ ವಿಮಾನದ ಚಾಲಕಳಾಗಿ ನೇಮಕಗೊಂಡ ಪ್ರಪ್ರಥಮ ಮಹಿಳೆ. ಇವಳ ಸಹೋದ್ಯೋಗಿಗಳಾಗಿ ಮೋಹನ್ ಸಿಂಗ್ ಜಿತರ್‌ವಾಲ್ ಹಾಗೂ ಭಾವನಾ ಕಂತ್ ಕೆಲಸ ಮಾಡಿದರು. ಬನಸ್ಥಲೀ ವಿಶ್ವವಿದ್ಯಾಲಯದಲ್ಲಿ ಬಿ.ಇ ಪದವಿಯನ್ನು ಪಡೆದ ಇವಳು "MIG-21 BISON" ಯುದ್ಧ ವಿಮಾನವನ್ನು ಒಬ್ಬಳೇ ನಡೆಸಿದ ಕೀರ್ತಿ ಪಡೆದಿದ್ದಾಳೆ. ಅತೀ ಎತ್ತರದಲ್ಲಿ ಹಾರುವ ಹಾಗೂ ಹೆಚ್ಚು ವೇಗದಲ್ಲಿ ಚಲಿಸುವ ವಿಶೇಷತೆ ಈ ವಿಮಾನಕ್ಕೆ ಇದೆ. 340 mph ವೇಗದಲ್ಲಿ ಅತೀ ದಕ್ಷತೆಯಿಂದ ವಿಮಾನವನ್ನು ಉಡಾಯಿಸಿ, ಅಷ್ಟೇ ಜಾಗರೂಕತೆಯಿಂದ ಚಲಾಯಿಸಿ ಮತ್ತೊಂದು ನಿಲ್ದಾಣದಲ್ಲಿ ಇಳಿಸಿದ ಹಿರಿಮೆ– ಗರಿಮೆ ಅವನಿ ಚತುರ್ವೇದಿಯವರದು. ವಿಮಾನ ಚಾಲನೆ ಕೇವಲ ಪುರುಷರ ಸ್ವತ್ತಾಗಿದ್ದಾಗ ಮಹಿಳೆಯೂ ಆ ಕಷ್ಟದ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಬಹುದೆಂದು ತೋರಿಸಿದ ಹಿರಿಮೆ ಅವನಿಯದು. ರಾಷ್ಟ್ರಪತಿ ರಾಮನಾಥ್ ಕೋವಿಂದ್‌ರವರಿಂದ 'ನಾರಿಶಕ್ತಿ' ಪುರಸ್ಕಾರವನ್ನು 2020ರ ಮಹಿಳಾ ದಿನಾಚರಣೆಯಂದು ಪಡೆದಿದ್ದಾಳೆ.

ಅವನಿ ಚತುರ್ವೇದಿಯು ವಾಯು ಸೈನ್ಯ ಪಡೆಯಲ್ಲಿ ವಿಮಾನ ಚಾಲಕಳಾಗಿ ಕೆಲಸ ಮಾಡಿದರೆ, ಜಲ ಸೇನೆಯಲ್ಲಿ ಚಾಲಕಳಾಗಿ ಶಿವಾಂಗಿ ಸ್ವರೂಪ್ ತನ್ನ ಸಾಧನೆಯನ್ನು ಮೆರೆದಿದ್ದಾಳೆ.



ತಂದೆ ಹರಿಭೂಷಣ್‌ಸಿಂಗ್ ಒಬ್ಬ ಅಧ್ಯಾಪಕರು. ತಾಯಿ– ಪ್ರಿಯಾಂಕ ಗೃಹಿಣಿ. ಬಿಹಾರದ ಮುಜಾಫರ್ ಜಿಲ್ಲೆಯ ಒಂದು ಸಣ್ಣ ರೈತ ಕುಟುಂಬದಿಂದ ಬಂದ ಈ ಹಳ್ಳಿ ಹುಡುಗಿ, ಸಿಕ್ಕಿಂ ಮಣಿಪಾಲ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ ಪಡೆದು, ಮುಂದೆ ಜೈಪುರದಲ್ಲಿ "ಮಾಲವೀಯ ರಾಷ್ಟ್ರೀಯ ತಾಂತ್ರಿಕ ಮಹಾವಿದ್ಯಾಲಯ"ದಲ್ಲಿ ಹೆಚ್ಚಿನ ಶಿಕ್ಷಣ ಮುಂದುವರೆಸಿದಳು. ಬೆಂಗಳೂರಿನಲ್ಲಿ ಅತ್ಯಂತ ಕಠಿಣತಮವಾದ SSB (Synic School Board) ಪರೀಕ್ಷೆಯಲ್ಲಿ ಉತ್ತೀರ್ಣ ಹೊಂದಿ, 6 ತಿಂಗಳ Naval Orientation Course ನ್ನು ಎಜ್ಹಿಮೋಲಾದಲ್ಲಿ Indian Navy Academy ಯಲ್ಲಿ ಮುಗಿಸಿದಳು. ನಂತರ AFA (Air force Academy) ಯಲ್ಲಿ ಕ್ಲಿಷ್ಟಕರವಾದ ವೈಮಾನಿಕ ತರಬೇತಿಯನ್ನು ಪಡೆದು 2ನೇ ಡಿಸೆಂಬರ್ 2019ರಲ್ಲಿ ಭಾರತೀಯ ಪ್ರಪ್ರಥಮ ಜಲ– ವಿಮಾನ ಚಾಲಕಳಾಗಿ ತನ್ನ ಸಾಧನೆಗೆ ತಕ್ಕ ಪುರಸ್ಕಾರ ಪಡೆದಳು.

"ಒಂದು ವಿಮಾನ ಚಾಲಕರಾಗಲು ತುಂಬಾ ಪ್ರತಿಭಾವಂತರಾಗಬೇಕಿಲ್ಲ. ಗುರಿ ತಲುಪಲು ಕಠಿಣ ಶ್ರಮ ಮತ್ತು ಸಾಧಿಸುವ ಛಲ ಅವಶ್ಯ" ಎಂದು ತನ್ನ ಅನುಭವದ ಮಾತನ್ನು ಹೇಳುತ್ತಾಳೆ. ಈಕೆಯೂ 'ನಾರಿಶಕ್ತಿ' ಪುರಸ್ಕಾರ ಪಡೆದಿದ್ದಾಳೆ.



ಬಾಲ್ಯದ ಕನಸನ್ನು ನನಸಾಗಿಸಿಕೊಂಡ ಕೆಚ್ಚೆದೆಯ ಧೀರ ವ್ಯಕ್ತಿತ್ವವನ್ನು ಪಡೆದ ನಾ ಕಂಡ ಬಾಲಕಿ ತೇಜಸ್ಮಿತ. ಈ ಹುಡುಗಿ ಬಾಲ್ಯದಿಂದಲೂ ನನಗೆ ಪರಿಚಿತಳು. ಶಾಲಾ ದಿನಗಳಲ್ಲೇ ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು ಎಲ್ಲರಂತೆ ಇಂಜಿನಿಯರ್/ ಡಾಕ್ಟರ್ ಆಗುವುದೋ ಎನ್ನುವುದಕ್ಕಿಂತ ಭಿನ್ನವಾಗಿರಲು ಅಪೇಕ್ಷೆ ಪಟ್ಟ ಹುಡುಗಿ. ಬಾಲ್ಯದಲ್ಲಿ ಕೇಳಿದ ಝಾನ್ಸಿರಾಣಿ, ಕಿತ್ತೂರು ರಾಣಿ ಚೆನ್ನಮ್ಮ, ಆಜಾದ್ ಹಿಂದ್ ಫೌಜ್‌ನ ಕ್ಯಾಪ್ಟನ್ ಲಕ್ಷ್ಮಿ ಇವರ ಕತೆಗಳನ್ನು ಕೇಳಿ ತಾನೂ ಸೈನ್ಯದಲ್ಲಿ ಸೇರಿ ದೇಶ ಸೇವೆ ಮಾಡಲೇಬೇಕೆಂಬ ಬಯಕೆಯನ್ನು ಹೃದಯದಲ್ಲಿ ಬಿತ್ತಿಕೊಂಡಳು. ಅದಕ್ಕೆ ಸಿದ್ಧಪಡಿಸಿಕೊಳ್ಳಲು ಎನ್‌ಸಿಸಿ ಸೇರಿ ಅದರ ಎಲ್ಲ ಹಂತದ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ಗಣರಾಜ್ಯೋತ್ಸವದ ಪೆರೇಡ್‌ನಲ್ಲಿ ಎನ್‌ಸಿಸಿ ತುಕಡಿಯಲ್ಲಿ ಭಾಗವಹಿಸುವ ಅವಕಾಶ ಪಡೆದಳು. ಪದವಿ ಮುಗಿಯುತ್ತಿದ್ದಂತೆ ಸೇನೆ ಸೇರುವ ಪರೀಕ್ಷೆಗಳಲ್ಲಿ ಅತ್ಯಂತ ಉನ್ನತ ಸ್ಥಾನಗಳನ್ನು ಗಳಿಸಿ, ಅಲ್ಲಿಯೇ ತರಬೇತಿಯ ಎಲ್ಲ ಕಷ್ಟಗಳನ್ನು ಸಹಿಸಿಕೊಂಡು, ತಾನೂ ಇಚ್ಛಿಸಿದ ಮಾರ್ಗದಲ್ಲಿ ಮುನ್ನಡೆದು ಇಂದು ಮೇಜರ್ ತೇಜಸ್ಮಿತ ಎಂದು ಕರೆಸಿಕೊಳ್ಳುತ್ತಿದ್ದಾಳೆ.

ಈ ಮೂರು ಜನ ಸಾಧಕಿಯರು ಇತ್ತೀಚಿನವರು. ಈಗ ನಾನು ಈ

ಪುಟ 4 ಕ್ಕೆ ➤

➢ ಪುಟ 3 ರಿಂದ.....

ಮೂವರಿಗೂ ಪ್ರೇರಣೆ ನೀಡಿದ ಓರ್ವ ಮಹಾನ್ ಸಾಧಕಿಯ ಬಗ್ಗೆ ಹೇಳುತ್ತೇನೆ. ಈಗ ಅವಳ ಕತೆಯನ್ನು ಅವಳ ಬಾಯಲ್ಲೇ ಹೇಳಿಸುತ್ತೇನೆ. ಅವಳ ಕತೆಯನ್ನು ಓದುವಾಗ ನಿನ್ನ ಕೈಯಲ್ಲಿ ಕಣ್ಣೊರೆಸಲು ಒಂದು ಕೈವಸ್ತ್ರ ಇರಲೇಬೇಕು.

ನಾನು ಕಲ್ಕತ್ತಾ ಜೈಲಿನಿಂದ ಅಂಡಮಾನ್ ತಲುಪಿದಾಗ ನಮ್ಮನ್ನು ಉಳಿದ ರಾಜಕೀಯ ಕೈದಿಗಳೊಂದಿಗೆ ಕತ್ತಲ ಕೋಣೆಯೊಳಗೆ ತಳ್ಳಲಾಯಿತು. ಅಲ್ಲಿ ಚಾಪೆ, ಕಂಬಳಿಗಳಂತಹ ಯಾವುದೇ ವಸ್ತುಗಳು ಕಾಣುತ್ತಿರಲಿಲ್ಲ. ಇಲ್ಲಿ ನೀರಿನ ನಡುವೆ ಅಜ್ಞಾತ ದ್ವೀಪದಲ್ಲಿ ಕೊಳೆಯುತ್ತಿದ್ದರೆ, ದೇಶಕ್ಕೆ ಸ್ವಾತಂತ್ರ್ಯ ಹೇಗೆ ದೊರಕೀತು..? ಎಂಬ ಚಿಂತೆ ಕಂಬಳಿ, ಚಾಪೆಯ ಚಿಂತೆಯನ್ನು ದೂರ ಮಾಡಿತ್ತು. ಹೇಗೂ ಆಯಾಸದಿಂದ ಕಲ್ಲು ಚಪ್ಪಡಿಯ ಮೇಲೆ ಒರಗಿದಂತೆಯೇ ನಿದ್ದೆ ಬಂದಿತ್ತು. ರಾತ್ರಿ ಸುಮಾರು 12 ಗಂಟೆ ಹೊತ್ತಿಗೆ ಒಬ್ಬ ಗಾರ್ಡ್ ಕಂಬಳಿ ತೆಗೆದುಕೊಂಡು ಬಂದು ಏನೊಂದೂ ಮಾತಾಡದೆ ಮಲಗಿದ್ದವರ ಮೇಲೆಸೆದು ಹೋದ. ಸೂರ್ಯೋದಯದ ನಂತರ ತಿನ್ನಲು ನನಗೆ ಕಿಚಡಿ ದೊರಕಿತು. ಸ್ವಲ್ಪ ಸಮಯದ ನಂತರ ಕಮ್ಮಾರ ಬಂದಿದ್ದ. ಕೈಗಳಿಗೆ ತೊಡಿಸಿದ ಸಂಕೋಲೆಯನ್ನು ತುಂಡರಿಸುವಾಗ ಕೈಯ ಚರ್ಮವೇ ಕಿತ್ತುಬಂದಿತ್ತು. ಕಾಲಿನ ಬೇಡಿ ತುಂಡರಿಸುವಾಗಂತೂ ಸುತ್ತಿಗೆ ಏಟು ಕಾಲ ಗಂಟಿಗೆ ಬಡಿದಿತ್ತು. ಒಮ್ಮೆಯಂತೂ ನೋವಿನಿಂದ ತಡೆಯಲಾರದೆ ಹೇಳಿದೆ "ಕಾಲಿನ ಮೇಲೆಯೇ ಸುತ್ತಿಗೆ ಬಡಿಯುತ್ತಿದ್ದೀಯಲ್ಲಾ .. ನೀನೇನು ಕುರುಡನೇ..?""ಕಾಲೇನು? ನಿನ್ನ ಎದೆಗೂ ಬಡಿಯಬಲ್ಲೆ.". ಎಂದು ದರ್ಪದಿಂದ ಹೇಳಿದನವ. ನನಗೆ ಕೋಪ ತಡೆಯಲಾಗಲಿಲ್ಲ. ತಲೆಯೆತ್ತಿ ಅವನ ಮುಖಕ್ಕೆ ಉಗುಳಿದೆ..! "ಮಹಿಳೆಯರಿಗೆ ಗೌರವ ಕೊಡಲು ಕಲಿತುಕೋ" ಎಂದೆ. ಜೈಲರನೂ ಅವರೊಂದಿಗಿದ್ದ. ಅವನೂ ದನಿ ಎತ್ತರಿಸಿ ಹೇಳಿದ "ನಿನ್ನನ್ನು ಬಿಡುಗಡೆ ಮಾಡಲಾಗುವುದು, ಆದರೆ ನಿನ್ನ ನೇತಾಜಿ ಸುಭಾಷ್ ಎಲ್ಲಿದ್ದಾರೆ? ಎಂದು ಹೇಳಿದರೆ ಮಾತ್ರ." "ಅವರು ವಿಮಾನ ದುರ್ಘಟನೆಯಲ್ಲಿ ತೀರಿಕೊಂಡರು." ನಾನು ಉತ್ತರಿಸಿದೆ. "ಪ್ರಪಂಚಕ್ಕೆಲ್ಲಾ ತಿಳಿದಿದೆ. ನಿನಗೆ ತಿಳಿದಿಲ್ಲವೇ?" "ಇಲ್ಲ. ನೇತಾಜಿ ಬದುಕಿದ್ದಾರೆ. ನೀನು ಸುಳ್ಳು ಹೇಳುತ್ತಿರುವೆ." ಜೈಲರ್ ಅಬ್ಬರಿಸಿದ.

"ಹೌದು ನೇತಾಜಿ ಬದುಕಿದ್ದಾರೆ..!" "ಎಲ್ಲಿ ಬೇಗ ಹೇಳು..?" "ನನ್ನ ಹೃದಯದಲ್ಲಿ..!" ನನ್ನ ಮಾತನ್ನು ಕೇಳಿದ ಜೈಲರನಿಗೆ ಸಿಟ್ಟು ತಡೆಯಲಾಗಲಿಲ್ಲ. "ನೋಡುತ್ತಿರು.... ನಿನ್ನ ಹೃದಯದಿಂದ ನೇತಾಜಿಯನ್ನು ಹೊರಗೆಳೆಯುತ್ತೇನೆ." ಎನ್ನುತ್ತಾ ನನ್ನ ಎದೆಗೆ ಕೈ ಹಾಕಿ ತೊಟ್ಟಿದ್ದ ಅಂಗವಸ್ತ್ರವನ್ನು ಹರಿದುಹಾಕಿದ. ನಂತರ ಕಮ್ಮಾರನಿಗೆ ಸನ್ನೆ ಮಾಡಿದ. ಕಮ್ಮಾರ ಎಲ್ಲಿಂದಲೋ ತೋಟದ ಮಾಲಿಗಳು ಉಪಯೋಗಿಸುವ ದೊಡ್ಡ ಕತ್ತರಿ ಒಂದನ್ನು ತಂದ. ಅದನ್ನು ನನ್ನೆದೆಗೆ ಒತ್ತಿ ಹಿಡಿದು ಬಲ ಸ್ತನವನ್ನು ಕತ್ತರಿಸತೊಡಗಿದ..! ಕತ್ತರಿ ಹರಿತವಿಲ್ಲದ ಕಾರಣ ಚರ್ಮ ಸಿಲುಕಿಕೊಂಡು ರಕ್ತ ಸುರಿಯುತ್ತಾ ಅಸಹನೀಯ ನೋವು ಕೊಡುತ್ತಿತ್ತು. ಇನ್ನೊಂದು ಕಡೆ ಜೈಲರ್ ನನ್ನ ಕತ್ತನ್ನು ಒತ್ತಿಹಿಡಿದು "ಇನ್ನೊಮ್ಮೆ ಬಾಯಿ ತೆರೆದರೆ ಎರಡೂ ಸ್ತನಗಳನ್ನೂ ಎದೆಯಿಂದ ಕಿತ್ತು ಹಾಕಲಾಗುವುದು." ಎಂದು ಘರ್ಜಿಸಿದ..! ಜೈಲರ್ ಮತ್ತೆ ಚಿಮ್ಮಟದಂತಹ ಆಯುಧದಿಂದ ನನ್ನ ಮೂಗಿನ ಮೇಲೆ ಹೊಡೆಯುತ್ತಾ ಹೇಳಿದ "ಇದನ್ನು ಬೆಂಕಿಯಲ್ಲಿ ಕಾಯಿಸದಿದ್ದುದು ನಿನ್ನ ಭಾಗ್ಯವೆಂದು ತಿಳಿದುಕೋ, ಇಲ್ಲದಿದ್ದರೆ ನಿನ್ನ ಎರಡು ಸ್ತನಗಳು ಎದೆಯಿಂದ ಕಿತ್ತು ಹೋಗಿರುತ್ತಿತ್ತು". ಎನ್ನುತ್ತಾ ಹೊರಟುಹೋದ. ಇದು ಯಾವುದೋ ಹಾರರ್ ಕಥೆಯಲ್ಲ..

ದೇಶಭಕ್ತಿಯನ್ನು ತನ್ನ ರಕ್ತದ ಕಣಕಣದಲ್ಲೂ ತುಂಬಿಕೊಂಡಿದ್ದ, ನೀರಾ ಆರ್ಯಾ ಎಂಬ ಆಜಾದ್‌ಹಿಂದ್‌ಫೌಜ್‌ನ ಝಾನ್ಸಿರಾಣಿ ರೆಜಿಮೆಂಟ್‌ನ ಸಿಪಾಯಿ ಬರೆದ ತನ್ನ ಆತ್ಮಕಥೆಯ ಒಂದು ಹಾಳೆ ಅಷ್ಟೇ..! ತಂದೆಯು ದೇಶಾದ್ಯಂತ ಹರಡಿದ್ದ ವ್ಯಾಪಾರ ಮತ್ತು ಸಂಪತ್ತನ್ನು ಬಿಟ್ಟು ನೀರಾ ಆರ್ಯರ ಸಹೋದರ ಬಸಂತ್ ಕುಮಾರ್ ಕೂಡಾ ನೇತಾಜಿಯವರ ಸೈನ್ಯವನ್ನು ಸೇರಿದ್ದರು.



ಈ ಇಬ್ಬರು ಅಣ್ಣ ತಂಗಿಯರ ಜೀವನ ಚರಿತ್ರೆಯನ್ನು ಕಾವ್ಯವಾಗಿ ಲೋಕಗೀತಾ ಗಾಯಕರು ಹಾಡುತ್ತಿದ್ದರೆಂದರೆ ಇವರ ಪರಾಕ್ರಮದ ಅರಿವಾದೀತು..!

ನೀರಾ ಆರ್ಯರ ವಿವಾಹ ಬ್ರಿಟಿಷ್ ಭಾರತದ CBI ಆಫೀಸರ್ ಶ್ರೀಕಾಂತ್ ಜಯರಂಜನ್‌ರೊಡನೆ ಆಗಿತ್ತು.

ಅದ್ಯಾವುದೋ ಘಳಿಗೆಯಲ್ಲಿ ನೇತಾಜಿಯವರ ಗುಪ್ತಸ್ಥಾನದ ಸುಳಿವು ಶ್ರೀಕಾಂತ್‌ಗೆ ತಿಳಿದುಬಿಟ್ಟಿತು. ಇದನ್ನು ತಿಳಿದ ನೀರಾ ಆರ್ಯರಿಗೆ ನೇತಾಜಿಯವರನ್ನು ಎಚ್ಚರಿಸಲು ಸಮಯವಿರಲಿಲ್ಲ. ಅವರ ಪ್ರಾಣ ಉಳಿಸಿಕೊಳ್ಳಲು ಒಂದೇ ದಾರಿ ಉಳಿದಿತ್ತು. ಅದೇನೆಂದರೆ ತನ್ನ ಪತಿ ಸಿಬಿಐ ಆಫೀಸರ್‌ನನ್ನು ಕೊಲ್ಲುವುದು..!

ನೇತಾಜಿ ಮತ್ತು ದೇಶದ ಸ್ವಾತಂತ್ರ್ಯಕ್ಕಿಂತಲೂ ಮಿಗಿಲಾದದ್ದು ಯಾವುದೂ ಇಲ್ಲ ಎಂಬ ಯೋಚನೆ ಬಂದದ್ದೇ ತಡ, ಪತಿ ಶ್ರೀಕಾಂತ್ ಜಯರಂಜನ್‌ನನ್ನು ಕೊಂದೇಬಿಡುತ್ತಾರೆ.. ಶಿಸ್ತಿನ ಸಿಪಾಯಿ ನೀರಾನಾಗಿನ್..!

'ಸ್ವರಾಜ್ ಹಿಂದ್ ಫೌಜ್' ನ ಸಮರ್ಪಣೆಯ ನಂತರ ಕೆಂಪುಕೋಟೆಯಲ್ಲಿ ಮೊಕದ್ದಮೆ ನಡೆದು ಎಲ್ಲ ಬಂಧಿತ ಸೈನಿಕರನ್ನು ಬಿಡುಗಡೆ ಮಾಡಲಾಯಿತು. ಆದರೆ ತನ್ನ ಪತಿಯ ಹತ್ಯೆ ಮಾಡಿದ್ದಕ್ಕಾಗಿ ಕಾಲಾಪಾನಿ ಶಿಕ್ಷೆಯನ್ನು ನೀರಾಆರ್ಯರಿಗೆ ನೀಡಲಾಯಿತು. ಸ್ವಾತಂತ್ರ್ಯದ ನಂತರದ ದಿನಗಳಲ್ಲಿ ನೀರಾಆರ್ಯ ಹೂ ಮಾರಾಟ ಮಾಡಿ ಜೀವನ ಸಾಗಿಸಿದರು. ಆದರೆ ಯಾವುದೇ ಸರಕಾರಿ ಪಿಂಚಣಿಗಾಗಲಿ, ಸಹಾಯಧನಕ್ಕಾಗಿ ಕೈಚಾಚಲೇ ಇಲ್ಲ..!

ನೀರಾಆರ್ಯರಂತಹ ಮಹಾನ್ ಪರಾಕ್ರಮಿ ದೇಶಪ್ರೇಮಿಗಳು ದೇಶಕ್ಕಾಗಿ ಸಹಿಸಿದ ನೋವು-ಕಷ್ಟಗಳನ್ನು ಓದುತ್ತಿರುವಂತೆ ಮೆದುಳು ಸ್ತಬ್ಧಗೊಳ್ಳುತ್ತದೆ.. ಮನಸ್ಸು ಮೂಕವಾಗುತ್ತದೆ ..ರಕ್ತ ಕುದಿಯತೊಡಗುತ್ತದೆ..! ಇಂದು ದೇಶದ್ರೋಹಿಗಳ ಆಮಿಷಕ್ಕೆ ಒಳಗಾಗಿ ಕಪಟ ದೇಶಪ್ರೇಮದ ಭಾಷಣ ಬಿಗಿಯುವ ಎಳಸುಗಳು, ನಾವೇ ಅಪ್ಪಟ ಗಾಂಧೀವಾದಿ ಎನ್ನುತ್ತಲೇ, ಪ್ರಧಾನಿಯನ್ನು ಮುಗಿಸಲು ಹಿಂಸಾತ್ಮಕ ಕರೆಕೊಡುವ ಸ್ವಘೋಷಿತ ಮುದಿಹೋರಾಟಗಾರರು, ಇವರೆಲ್ಲರ ನಡುವೆ ನೀರಾಆರ್ಯರಂತಹ ಮಹಾನ್ ತ್ಯಾಗಮೂರ್ತಿಗಳನ್ನು ನೆನಪಿಸಿಕೊಂಡರೆ ಮಹಿಳಾ ದಿವಸಕ್ಕೆ ನಿಜವಾಗಿಯೂ ಅರ್ಥ ಬಂದೀತು..!

ಈ ನೀರಾಆರ್ಯಳು ಆ ಮೂವರಿಗೆ ಮಾತ್ರವಲ್ಲದೇ ನಮ್ಮ ನಿಮ್ಮೆಲ್ಲರಿಗೂ ಪ್ರೇರಕ ಶಕ್ತಿಯಲ್ಲವೇ? ಈ ಪತ್ರ ಓದಿದ ನಂತರ ನಿನ್ನ ಮನಸ್ಸಿನ ಭಾವನೆಯನ್ನು ಹಂಚಿಕೊಳ್ಳುವೆಯಲ್ಲವೇ?

ನಿನ್ನ ಶುಭಾಕಾಂಕ್ಷಿ
ಅಧ್ಯಾಪಕಿ,
**ಶ್ರೀಮತಿ ಆರ್. ಸೀತಾಲಕ್ಷ್ಮಿ**

**ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ. – ಅಕ್ಕಮಹಾದೇವಿ**

# ಪರೀಕ್ಷೆ : ಒಂದು ಪ್ಲಾನ್ ಹಾಕೋಣ ಬನ್ನಿ

**ಸತ್ಯ ಘಟನೆ:** ಒಂದು ಊರಿನ ಬಸ್ ಸ್ಟ್ಯಾಂಡ್. ಅಲ್ಲಿ ಕುಡಿಯುವ ನೀರಿನ ಟ್ಯಾಂಕ್ ಸ್ವಲ್ಪ ದೂರದಲ್ಲಿದೆ. ಒಂದು ಮುಸ್ಸಂಜೆಯ ಹೊತ್ತು. ಮಹಿಳೆಯೊಬ್ಬಳು ನೀರು ಕುಡಿಯಲು ಹೋದಳು. ಅವಳು ಮೈ ತುಂಬಾ ಒಡವೆ ಧರಿಸಿರುವುದನ್ನು ಅಲ್ಲಿದ್ದ ಒಬ್ಬ ಕಳ್ಳ ಗಮನಿಸಿದ. ಅವಳು ನೀರು ಕುಡಿದು ಹಿಂತಿರುಗುವುದರಲ್ಲಿ ಅವಳಿಗೆ ಕಾಣುವ ಹಾಗೆ ನೆಲದ ಮೇಲೆ 50 ಮತ್ತು 100 ರೂ ಗಳ ಎಂಟು– ಹತ್ತು ನೋಟುಗಳನ್ನು ಹಾಕಿದ. ನೀರು ಕುಡಿದ ಅವಳು ಅವನ್ನು ಹೆಕ್ಕಿಕೊಳ್ಳಲು ಬಗ್ಗಿದಾಗ ತಾನೂ ಹೋದ. ತನಗೂ ಅದು ಆಕಸ್ಮಾತ್ ಕಾಣಿಸಿದಂತೆ ನಾಟಕವಾಡಿದ. ಆ ಮಹಿಳೆಗೆ ಮೆಲ್ಲನೆ ಹೇಳಿದ 'ಇಬ್ಬರೂ ಹಂಚಿಕೊಳ್ಳೋಣ. ಆದರೆ ಅಲ್ಲಿ ಜನ ಇದ್ದಾರೆ, ಗಲಾಟೆ ಆಗುತ್ತೆ, ಆದ್ದರಿಂದ ಬಸ್‌ಸ್ಟ್ಯಾಂಡ್ ಹಿಂಭಾಗಕ್ಕೆ ಹೋಗೋಣ'. ಹಣದ ಆಸೆಗೆ ಮನಸೋತ ಆ ಮಹಿಳೆ ಸಮಯ–ಸಂದರ್ಭ ಯೋಚಿಸದೇ ಅವನ ಜೊತೆ ನಡೆದಳು. ಬಸ್‌ಸ್ಟ್ಯಾಂಡಿನ ಹಿಂಭಾಗಕ್ಕೆ ಹೋದೊಡನೆ ಆ ಕಳ್ಳ ಮಹಿಳೆಯ ಕೊರಳಿನಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಓಡಿದ!

ಕಳ್ಳತನದಂತಹ ಕನಿಷ್ಟ ಕೆಲಸ ಮಾಡುವವರೇ ಅದೆಷ್ಟು ಪ್ಲಾನ್ ಮಾಡಿ ಮಾಡುತ್ತಾರೆ! ಆದರೆ ವಿದ್ಯಾರ್ಜನೆಯಂತಹ ಶ್ರೇಷ್ಠ ಕೆಲಸ ಮಾಡುವ ನಾವು ಪರೀಕ್ಷೆ ಎದುರಿಸಲು ಸರಿಯಾದ ಒಂದು ಪ್ಲಾನ್ ಮಾಡಬೇಡವೇ?

ಮೊದಲೇ ಪ್ಲಾನ್ ಮಾಡಿ ಅನಂತರ ಮಾಡಿದ ಕೆಲಸ ಅತ್ಯಂತ ತೃಪ್ತಿಕರವಾಗಿ ಆಗುತ್ತದೆ ಎಂಬುದು ಎಲ್ಲರಿಗೂ ಅರ್ಥವಾಗಬೇಕಾದ ಒಂದು ಸಾಮಾನ್ಯ ತಿಳುವಳಿಕೆ.

ಈಗ ನಾವು ಮಾಡಬೇಕಾದ ಕೆಲಸವೆಂದರೆ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಸಾಧ್ಯವಾದಷ್ಟೂ ಉತ್ತಮ ಅಂಕ ಗಳಿಸುವುದು, ಅಲ್ಲವೆ ಮಕ್ಕಳೇ? ನಮಗೆ ಆರು ವಿಷಯಗಳಿವೆ. ಪ್ರತಿಯೊಂದು ವಿಷಯಕ್ಕೂ ಪಠ್ಯಪುಸ್ತಕ ಮತ್ತು ಅದರಲ್ಲಿ ಪಾಠಗಳಿವೆ. ವರ್ಷದುದ್ದಕ್ಕೂ ಶಿಕ್ಷಕರು ಆ ಪಾಠಗಳನ್ನು ಕಲಿಸಿದ್ದಾರೆ. ನಾವೂ ತಕ್ಕಮಟ್ಟಿಗೆ ಓದಿದ್ದೇವೆ. ಈಗ ನಾವು ಮಾಡಬೇಕಾದ ಪ್ಲಾನ್‌ನಲ್ಲಿ ಈ ಕೆಳಗಿನ ಅಂಶಗಳಿರಬೇಕು.

- ನಮಗೆ ಸುಲಭವಾದ ವಿಷಯಗಳಾವುವು? (ಕಷ್ಟವಾದ ವಿಷಯಕ್ಕೆ ಸ್ವಲ್ಪ ಹೆಚ್ಚು ಸಮಯ ನೀಡಬೇಕಾಗುತ್ತದೆ).
- ನನ್ನ ಗುರಿ ಏನು? ಶೇ. 90 ಕ್ಕಿಂತ ಹೆಚ್ಚು ಅಂಕ ಗಳಿಸುವುದು ಗುರಿಯಾದರೆ ಅದಕ್ಕೆ ಎಷ್ಟು ಪ್ರಯತ್ನ ಹಾಕಬೇಕು? ಹೇಗೆ ಹಾಕುವುದು?




- ಹೇಗೆ ಸಮಯ ಹೊಂದಾಣಿಕೆ ಮಾಡಿಕೊಳ್ಳುವುದು? ಎಲ್ಲೆಲ್ಲಿ ನನ್ನ ಸಮಯ ವ್ಯರ್ಥವಾಗುತ್ತಿದೆ? ಆರೋಗ್ಯ ಹಾಳು ಮಾಡಿಕೊಳ್ಳದೆ ನಿದ್ದೆಯನ್ನೇನಾದರೂ ಕಡಿಮೆ ಮಾಡಿಕೊಳ್ಳಬಹುದೆ?
- ದಿನದ ಎಷ್ಟು ಸಮಯ ಅಭ್ಯಾಸಕ್ಕಾಗಿ ತೆಗೆದಿಡಬೇಕು? ಏಳುವುದು ಮತ್ತು ಮಲಗುವುದು ಎಷ್ಟು ಹೊತ್ತಿಗೆ?
- ಕಷ್ಟವಾದ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಯಾರ ನೆರವನ್ನು ಪಡೆಯಲಿ?
- ಎಲ್ಲಾ ವಿಷಯಗಳನ್ನು ಎಷ್ಟು ಬಾರಿ ಪುನರಾವರ್ತನೆ ಮಾಡಲು ಸಾಧ್ಯ?
- ಮಾದರಿ ಪ್ರಶ್ನೆ ಪತ್ರಿಕೆಗಳು ನನ್ನ ಬಳಿ ಇವೆಯೆ? ಅಣಕು ಪರೀಕ್ಷೆಯನ್ನು ನನಗೆ ನಾನೇ ಮಾಡಿಕೊಂಡರೆ ಹೇಗೆ?
- ಪರೀಕ್ಷೆ ಮೊದಲ ಕೆಲವು ದಿನಗಳು ದಿನದ 24 ಗಂಟೆಯೂ ಸಿದ್ಧತೆ ಮಾಡಿಕೊಳ್ಳಲು ರಜೆ ಇರುತ್ತದೆ. ಅದನ್ನು ಅಭ್ಯಾಸಕ್ಕೆ ಹೇಗೆ ಸದುಪಯೋಗಪಡಿಸಿಕೊಳ್ಳಬಹುದು? Combined Study ಮಾಡಿದರೆ ಹೇಗೆ?

ಇವೆಲ್ಲ ಪ್ಲಾನ್‌ಗಳಿಗೆ ಉತ್ತರವನ್ನು ಬರೆದಿಟ್ಟುಕೊಳ್ಳುವುದು ಸೂಕ್ತ. 'ಪ್ಲಾನ್ ಮಾಡೋದು ಸುಲಭ. ಆದರೆ ಅದನ್ನು ಅನುಸರಿಸೋದು ಕಷ್ಟ' ಇದು ಕೆಲವರ ಮಾತು ಬನ್ನಿ, ಅದನ್ನು ಸುಳ್ಳು ಮಾಡೋಣ!

**'ನಾನು ಪ್ಲಾನೂ ಮಾಡುವೆ, ಅದನ್ನು ಅನುಸರಿಸಿಯೇ ತೋರಿಸುವೆ'** ಈ ಮಂತ್ರ ನಮ್ಮದಾಗಲಿ.

**(ಜಿ. ಕೆ. ವೆಂಕಟೇಶ ಮೂರ್ತಿ ಅವರ 'SSLC ಯುದ್ಧವಲ್ಲ ಆಟ' ಪುಸ್ತಕದಿಂದ)**

## ಮಹಿಳೆಯರ ಕುರಿತು ಸರ್ವಜ್ಞನ ವಚನಗಳು

1. ಒಪ್ಪವುಳ್ಳ ಹೆಣ್ಣಲ್ಲಿ ತಪ್ಪ ಸಾಧಿಸಬೇಡ ಕರ್ಪೂರದ ಮೇಲೆ ಕಸವಿರಲು ಅದನೊಪ್ಪರೊಪ್ಪದವರುಂಟೇ ಸರ್ವಜ್ಞ
2. ಹೆಣ್ಣಿನಂದಲೇ ಇಹವು ಹೆಣ್ಣಿನಿಂದಲೇ ಪರವು ಹೆಣ್ಣಿಂದಲೇ ಸಕಲ ಸಂಪದವು ಹೆಣ್ಣೊಲ್ಲ ದಣ್ಣಗಳು ಯಾರು ಸರ್ವಜ್ಞ
3. ತಾಯಿಯೆಂಬೆನಲ್ಲದೆ ತಾಯಿ ನಾನೆಂಬೆನೆ? ತಾಯಿಯೆಂದಾನು ನುಡಿದೇನು ಪರಸ್ತ್ರೀಯ ತಾಯಿಯೆಂದೆಂಬೆ ಸರ್ವಜ್ಞ

**ಶಿಕ್ಷಕ ಸ್ತಂಭ**

# ನಾವೂ ಹೀಗಾಗಬಹುದೇ?



**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು

ವಿದ್ಯಾ ಇಲಾಖೆಯಲ್ಲಿ ನಡೆಯುವ ಹಲವು ಕಾರ್ಯಕ್ರಮಗಳಲ್ಲಿ 'ಇನ್ಸ್‌ಪೆಕ್ಷನ್' ಕೂಡ ಒಂದು ಪ್ರಮುಖ ಅಂಗ. ಆಡಳಿತಕ್ಕೆ ಸಂಬಂಧಿಸಿದ್ದು ಒಂದು ಭಾಗವಾದರೆ ಸಂಸ್ಥೆಯ ಶೈಕ್ಷಣಿಕ ಕಾರ್ಯಾಚರಣೆಗಳು, ಅವುಗಳ ಪ್ರಗತಿಗೆ ಸಂಬಂಧಿಸಿದ್ದು ಈ 'ಇನ್ಸ್‌ಪೆಕ್ಷನ್' ನ ಎರಡನೆಯ ಭಾಗವಾಗಿರುತ್ತಿತ್ತು. ವಿಷಯತಜ್ಞರು, ಇಲಾಖೆಯ ಪ್ರಮುಖ ಅಧಿಕಾರಿಗಳು ತರಗತಿಗಳಿಗೆ ಹೋಗಿ ಶಿಕ್ಷಕರ ಬೋಧನಾ ವಿಧಾನ, ಶೈಲಿ, ವಿಷಯಜ್ಞಾನ, ವಿದ್ಯಾರ್ಥಿಗಳ ಮೇಲೆ ಅವುಗಳ ಪರಿಣಾಮ, ಫಲಿತಾಂಶ ಮುಂತಾದ ಅಂಶಗಳನ್ನೆಲ್ಲ ಗಮನಿಸುತ್ತಿದ್ದರು. ಸೂಕ್ತ ಸಲಹೆ, ಸೂಚನೆಗಳನ್ನು ನೀಡುತ್ತಿದ್ದರು.

ಇದೆಲ್ಲ ಶಾಲಾ ಹಂತಗಳಲ್ಲಿ ನಡೆಯುವ ವಿದ್ಯಮಾನಗಳು. ಅದೊಂದು ಮುನಿಸಿಪಲ್ ಹೈಸ್ಕೂಲ್. ಅಲ್ಲೊಬ್ಬ ಶಿಕ್ಷಕರು ಒಂದು ದಿನ ತರಗತಿಯಲ್ಲಿ ಪಾಠ ಮಾಡುತ್ತಿದ್ದರು. ಅನಿರೀಕ್ಷಿತವಾಗಿ ವಿದ್ಯಾ ಇಲಾಖೆಯಲ್ಲಿ ಡೆಪ್ಯೂಟಿ ಡೈರೆಕ್ಟರ್ ಆಗಿದ್ದ ಹಿರಿಯರೊಬ್ಬರು ಶಾಲೆಗೆ ಬಂದರು. ಈ ಶಿಕ್ಷಕರ ತರಗತಿಗೂ ಪ್ರವೇಶಿಸಿದರು. ಹಿಂದಿನ ಬೆಂಚಿನಲ್ಲಿ ಹೋಗಿ ಕುಳಿತರು. ಅದು ಅವರ 'ಸರ್‌ಪ್ರೈಸ್ ಇನ್ಸ್‌ಪೆಕ್ಷನ್' ಆಗಿತ್ತು. ಆದರೆ, ಆ ಸಮಯದಲ್ಲಿ ಶಿಕ್ಷಕರ ಆ ತರಗತಿ ಮುಗಿಯುವುದರಲ್ಲಿತ್ತು. ಬೆಲ್ಲಾಗಲು ಇದ್ದದ್ದು ಕೇವಲ ಐದು ನಿಮಿಷವಷ್ಟೇ. ಪೂರೈಸಿದ್ದ ಪಾಠದ ಬಗ್ಗೆ ಒಂದೆರಡು ಮೂರು ಪ್ರಮುಖ ಅಂಶಗಳನ್ನು ಗುರುತು ಹಾಕಿಕೊಳ್ಳುವಂತೆ ಸೂಚಿಸಿದ್ದ ಆ ಶಿಕ್ಷಕರು ಮೌನವಾಗಿ ಕುಳಿತಿದ್ದರು. ಹುಡುಗರೂ ಆ ಕಾರ್ಯದಲ್ಲಿ ತೊಡಗಿದ್ದರಿಂದ ತರಗತಿಯಲ್ಲಿ ಸೂಜಿ ಬಿದ್ದರೂ ಸಹ ಕೇಳಿಸುವಂತೆ ಮೌನತುಂಬಿತ್ತು. ಅದು ಆ ಶಿಕ್ಷಕರ ಪಾಠದ ಕ್ರಮವಾಗಿತ್ತು. ಅದನ್ನು ನೋಡಿ ಆ ಅಧಿಕಾರಿಗಳು ತರಗತಿಯಲ್ಲಿ ಯಾವ ಪಾಠವೂ ನಡೆಯುತ್ತಿಲ್ಲವೆಂದು ಭಾವಿಸಿ ವ್ಯಗ್ರರಾಗಿದ್ದರು.

ಅಷ್ಟರಲ್ಲಿ ಪಿರಿಯಡ್ ಮುಗಿದಿತ್ತು, ಬೆಲ್ಲಾಗಿತ್ತು, ಹುಡುಗರೆಲ್ಲಾ ಹೊರಗೆ ಹೋದರು. ಅಧಿಕಾರಿಗಳು ತಮ್ಮಷ್ಟಕ್ಕೆ ತಾವೇ ಸಿಟ್ಟಿನಿಂದ, ಅಸಮಾಧಾನದಿಂದ ಧುಮುಗುಟ್ಟುತ್ತಾ ಹೊರಬಂದಿದ್ದರು. ಬಂದಿದ್ದ ವ್ಯಕ್ತಿ ಯಾರು? ಏಕೆ ಬಂದಿದ್ದರು? ಏಕೆ ಹೋದರು? ಒಂದೂ ಅರ್ಥವಾಗದೆ ಶಿಕ್ಷಕರು ನಕ್ಕು ಸುಮ್ಮನಾಗಿದ್ದರು.

ಆದರೆ, ಆ ದಿನ ಸಾಯಂಕಾಲವೇ ಎಲ್ಲ ಶಿಕ್ಷಕರ ಸಭೆ ಕರೆದಿದ್ದ ಅಧಿಕಾರಿಗಳು ಎಲ್ಲ ಮಾಸ್ತರರ ಬಗ್ಗೆ ಮೆಚ್ಚಿಗೆಯ ಮಾತಾಡಿದ್ದರು. ಆದರೆ ಆ ಒಬ್ಬ ಶಿಕ್ಷಕರನ್ನು ಕುರಿತು ಅವರಾಡಿದ್ದು, 'His class was a tragedy' ಆಗ ಆ ಶಿಕ್ಷಕರು ಕೂಡಲೇ ಪ್ರತಿಕ್ರಿಯಿಸಿದ್ದರು, 'you came only at the last minute to my class when it was about to close'. ಅವರನ್ನೇ ಕೆಕ್ಕರಿಸಿ ದಿಟ್ಟಿಸಿದ್ದ ಅಧಿಕಾರಿ ಎಚ್ಚರಿಸುವ ದನಿಯಲ್ಲಿ, 'It is O.K. young man, I understand what you say. Well, I will come to your class tomorrow' ಎಂದು ಹೇಳಿ ಹೊರಟುಹೋಗಿದ್ದರು.

ಮಾರನೇ ದಿನ, ಸಿಬ್ಬಂದಿಯೆಲ್ಲ 'ಇಂದು ಈ ಅಧಿಕಾರಿ ನಮ್ಮ ಶಿಕ್ಷಕರ ಜೀವ ತಿಂದು, ಅವರ ಕೆರಿಯರನ್ನೇ ಹಾಳುಮಾಡುತ್ತಾರೆ' ಎಂದುಕೊಂಡರು. ಅಧಿಕಾರಿ ಶಿಕ್ಷಕರ ತರಗತಿಗೆ ಹೋಗಿ ಒಂದು ಇಡೀ ಪಿರಿಯಡ್ ಕಾಲ ಅವರ ಉಪನ್ಯಾಸದ ವೈಖರಿಯನ್ನು ನಿಬ್ಬೆರಗಾಗಿ ಹುಬ್ಬೇರಿಸಿಕೊಂಡು ಕೇಳಿದ್ದರು. ವಿದ್ಯಾರ್ಥಿಗಳು ಏಕಾಗ್ರತೆಯಿಂದ ಅವರ ಬೋಧನೆಯನ್ನು ಆಲಿಸುವುದನ್ನೂ ಗಮನಿಸಿದ್ದರು. ತರಗತಿ ಮುಗಿದಾಗ ಶಿಕ್ಷಕರಿಗೆ ಹಸ್ತಲಾಘವ ಕೊಟ್ಟು 'You are an excellent teacher keep it up' ಎಂದು ಪ್ರಶಂಸಿಸಿ ಹೋಗಿದ್ದರು.

ಆ ಶಿಕ್ಷಕರು ಪಡೆದುಕೊಂಡಿದ್ದುದು ಕನ್ನಡ ಎಂ.ಎ. ಪದವಿ. ಆ ಶಾಲೆಯಲ್ಲಿ ಅವರಿಗೆ ವಹಿಸಿದ್ದುದು ಆಂಗ್ಲಭಾಷೆಯನ್ನು ಬೋಧಿಸುವ ಜವಾಬ್ದಾರಿ. ಆದರೆ ಅವರು ಪಡೆದುಕೊಂಡಿದ್ದ ವಿಷಯ ಪರಿಣತಿ, ಕಾರ್ಯಕ್ಷಮತೆ, ಬದ್ಧತೆ, ಆತ್ಮವಿಶ್ವಾಸ ಎಲ್ಲವೂ ಅವರೊಬ್ಬ ಸಮರ್ಥ ಶಿಕ್ಷಕರಾಗಲು ಸಹಕರಿಸಿದ್ದುವು. ಅವರೇ ಕನ್ನಡ ಸಾಹಿತ್ಯ ಲೋಕದಲ್ಲಿ, ಸಾರಸ್ವತ ಲೋಕದಲ್ಲಿ ಅಗ್ರಸ್ಥಾನದಲ್ಲಿರುವ ಪ್ರೊ. ಜಿ. ವೆಂಕಟಸುಬ್ಬಯ್ಯನವರು. ಸಾವಿರಾರು ವಿದ್ಯಾರ್ಥಿಗಳ, ಮೂರು ತಲೆಮಾರಿನ ವಿದ್ಯಾರ್ಥಿಗಳ ಪ್ರೀತಿಯ 'ಮೇಷ್ಟ್ರು'. ಆ ಅಧಿಕಾರಿಗಳ ಹೆಸರು ಡಾ. ಕಿನಿ.

ಆ 'ಮೇಷ್ಟ್ರು' ತಮ್ಮ ವಿದ್ಯಾರ್ಹತೆ, ತಮ್ಮ ಪಾಲಿಗೆ ಬಂದ ಜವಾಬ್ದಾರಿಗಿಂತ ಉನ್ನತಮಟ್ಟದ ಹೊಣೆಗಾರಿಕೆ ನಿರ್ವಹಿಸುವಂತಹುದೆಂದು ಅರಿವಿದ್ದರೂ, ತಮ್ಮ ಕರ್ತವ್ಯ ನಿರ್ವಹಣೆಗೆ ಯಾವುದೇ ಲೋಪ ಬಾರದಂತೆ ನಿರ್ವಹಿಸಿದ್ದರು.

ಹಿರಿಯ ವಚನಕಾರರಾದ ಅಲ್ಲಮಪ್ರಭು ಹೇಳುತ್ತಾರೆ, 'ಕೊಟ್ಟ ಕುದುರೆಯನೇರಲರಿಯದವರು ವೀರರೂ ಅಲ್ಲ, ಧೀರರೂ ಅಲ್ಲ' ಎಂದು. 'ಮೇಷ್ಟ್ರು' ತಮ್ಮ ಸಾಮರ್ಥ್ಯವನ್ನು ನಿರೂಪಿಸಿದ್ದರು. ನುರಿತ ಸವಾರನಿಗೆ ಯಾವ ಕುದುರೆಯಾದರೇನು? ಅಲ್ಲವೇ

ಇಂತಹ ಬದ್ಧತೆ, ಆತ್ಮವಿಶ್ವಾಸ, ಕಾರ್ಯಕ್ಷಮತೆ, ಕರ್ತವ್ಯನಿಷ್ಠೆ, ಅನ್ಯಾಯವನ್ನು ಪ್ರತಿಭಟಿಸುವ ದಿಟ್ಟತನ, ಸವಾಲುಗಳನ್ನು ಎದುರಿಸುವ ಧೈರ್ಯ– ಈ ಎಲ್ಲ ಗುಣಗಳನ್ನು ನಮ್ಮಲ್ಲಿಯೂ ಅಳವಡಿಸಿಕೊಳ್ಳಬಹುದೇ?

●

ಸಂಘದ ವಾರ್ತೆ

# ರಾಷ್ಟ್ರೀಯ ಶಿಕ್ಷಣ ನೀತಿ– ಒಂದು ವಿಚಾರ ಸಂಕಿರಣ

ಈಗಿನ ಶಿಕ್ಷಣ ಪದ್ಧತಿಯಲ್ಲಿ ನಮ್ಮ ಮಕ್ಕಳು ಜ್ಞಾನಕ್ಕಾಗಿ ಓದುವುದಕ್ಕಿಂತ ಉದ್ಯೋಗಕ್ಕಾಗಿಯೇ ಓದುತ್ತಾರೆ. ಇದೇ ಕಾರಣಕ್ಕೆ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಪರಿಸ್ಥಿತಿ ಬದಲಾಯಿಸುವ ಅಂಶಗಳು ಹೊಸ ಶಿಕ್ಷಣ ನೀತಿಯಲ್ಲಿವೆ ಎಂದು ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಬಸವರಾಜ ಪಾಟೀಲ ಸೇಡಂ ಹೇಳಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ ಹಾಗೂ ಪಪೂ ಶಿಕ್ಷಣ ಇಲಾಖೆ ಆಶ್ರಯದಲ್ಲಿ ಆಯೋಜಿಸಿದ್ದ "ರಾಷ್ಟ್ರೀಯ ಶಿಕ್ಷಣ ನೀತಿ –2020' ಕುರಿತ ವಿಚಾರ ಸಂಕಿರಣ ಹಾಗೂ ಮುಖ್ಯಶಿಕ್ಷಕರ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ದೇಶವನ್ನು ಉತ್ಕೃಷ್ಟದ ಕಡೆಗೆ ಕೊಂಡೊಯ್ಯುವ ಮತ್ತು ಮಕ್ಕಳಲ್ಲಿ ಕೌಶಲ್ಯ ಹೆಚ್ಚಿಸುವ ನಿಟ್ಟಿನಲ್ಲಿ ಹೊಸ ಶಿಕ್ಷಣ ನೀತಿ ರೂಪಿಸಲಾಗಿದೆ. ಶಿಶುವಿಹಾರ ಗುರುಕುಲ ಮಾದರಿಯಂತೆ ಮಕ್ಕಳ ಮೇಲೆ ಒತ್ತಡ ಹೇರದೆ ಅವರಾಗಿಯೇ ರಾಷ್ಟ್ರೀಯತೆ ಕಲಿಯುವಂತ ಹಲವು ಮಹತ್ವದ ಅಂಶಗಳಿವೆ. ಇದೊಂದು ಮಾದರಿ ನೀತಿ' ಎಂದರು.

'ಇದರ ಮಹತ್ವ ಅರಿತಿರುವ ಪ್ರಧಾನಿ ಮೋದಿ ಅವರು ಈಗಾಗಲೇ ಬಜೆಟ್‌ನಲ್ಲಿ ಶಿಕ್ಷಣಕ್ಕೆ ನೀಡುತ್ತಿದ್ದ ಅನುದಾನವನ್ನು ಶೇ 6 ರಷ್ಟು ಹೆಚ್ಚಿಸಿದ್ದಾರೆ. ಈ ಮೂಲಕ ಶಿಕ್ಷಣ ಸುಧಾರಣೆ ಆರಂಭವಾಗಿದೆ' ಎಂದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆಗೆ ಶಿಕ್ಷಕರೇ ಬದಲಾವಣೆಯ ಮಂತ್ರದಂಡವಾಗಿದ್ದು, ಶಿಕ್ಷಕರೇ ಪೂರ್ಣಪ್ರಮಾಣದಲ್ಲಿ ಅನುಷ್ಠಾನ ಮಾಡಬೇಕು ಎಂದು ಎಂಎಲ್ಸಿ ಹಾಗೂ ಎನ್‌ಇಪಿ ಅನುಷ್ಠಾನ ಕಾರ್ಯಪಡೆ ಸದಸ್ಯರಾದ ಅರುಣ್ ಶಹಾಪುರ ಹೇಳಿದರು.

ರಾಷ್ಟ್ರೀಯ ಶಿಕ್ಷಣ ನೀತಿ 2020 ನ್ನು ದೇಶದಲ್ಲಿಯೇ ಮೊದಲ ರಾಜ್ಯವಾಗಿ ಕರ್ನಾಟಕ ಸ್ವೀಕರಿಸಿದೆ. ಹಂತ ಹಂತವಾಗಿ ಅನುಷ್ಠಾನಕ್ಕೆ ರಾಜ್ಯ ಸರಕಾರ ತಯಾರಿ ನಡೆಸಿದ್ದು, ಪ್ರಾಥಮಿಕ ಹಂತದಿಂದ ಆರಂಭದಲ್ಲೇ ಪಠ್ಯಕ್ರಮ ಮಾಡುವ ಅವಶ್ಯವಿದೆ. ಈ ನೀತಿಯನ್ನು ಜಾರಿಗೊಳಿಸುವ ಜವಾಬ್ದಾರಿ ಶಿಕ್ಷಕರ ಮೇಲಿದ್ದು, ಶಿಕ್ಷಕರು ಬದಲಾಗದ ಹೊರತು ಎನ್‌ಇಪಿ ಜಾರಿ ಅಸಾಧ್ಯ, ಆದ್ದರಿಂದ ಪ್ರತಿಯೊಬ್ಬ ಶಿಕ್ಷಕರು ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಓದಿ ಅನುಷ್ಠಾನಗೊಳಿಸಲು ಮುಂದಾಗಬೇಕು. ಇದರಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

### ಕಲ್ಯಾಣದ ಹುದ್ದೆ ಭರ್ತಿಯಾಗದಿದ್ದರೆ ಅಭಿವೃದ್ಧಿ ಹೇಗೆ?

ಕಲ್ಯಾಣ ಕರ್ನಾಟಕದಲ್ಲಿ ನೇಮಕಾತಿಗಳು ಸ್ಥಗಿತಗೊಂಡರೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಆಗೋದು ಹೇಗೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಅಮರನಾಥ ಪಾಟೀಲ್ ಹೇಳಿದರು. ಈ ಭಾಗಕ್ಕೆ ವಿಶೇಷ ಸ್ಥಾನಮಾನ 371 ಜೆ ಜಾರಿಗೊಳಿಸಲಾಗಿದೆ. ಈ ಸ್ಥಾನಮಾನ ಪ್ರಕಾರ ಯಾವುದೇ ಆರ್ಥಿಕ ತೊಂದರೆಗಳು ನೇಮಕಾತಿಗೆ ಅಡ್ಡಿಯಾಗುವುದಿಲ್ಲ ಎಂದು ಹೇಳಿದೆ. ಆದರೆ, ಇಂದು ಶಿಕ್ಷಕರ, ಉಪನ್ಯಾಸಕರ, ಪ್ರಾಧ್ಯಾಪಕರ ಕೊರತೆಯಿದ್ದು, ಹುದ್ದೆಗಳು ಭರ್ತಿ ಮಾಡಿ ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಮುಂದಾಗಬೇಕು. ಜತೆಗೆ ಈ ಭಾಗದ ಜಿಇಆರ್ ಹೆಚ್ಚಳಕ್ಕೆ ಮುಂದಾಗಬೇಕು ಎಂದರು.

ಪ್ರಸ್ತುತ ಶಿಕ್ಷಣದಲ್ಲಿ ಕೌಶಲ್ಯತೆಯಿಲ್ಲ. ಆದರೆ, ಹೊಸ ಶಿಕ್ಷಣ ನೀತಿಯಲ್ಲಿ ಕೌಶಲ್ಯಕ್ಕೆ ಮಹತ್ವ ಕೊಟ್ಟು, ಉತ್ಕೃಷ್ಟ ಜ್ಞಾನ, ಕೌಶಲ್ಯ ಹೆಚ್ಚಳಕ್ಕೆ ಮತ್ತು ಮಾನವೀಯ ಮೌಲ್ಯಗಳನ್ನು ಶಿಕ್ಷಣ ನೀತಿಯಲ್ಲಿ ಅಳವಡಿಸಲಾಗಿದೆ. ಗುಣಮಟ್ಟ ಮತ್ತು ಶ್ರೇಷ್ಠತೆಗೆ ಮಹತ್ವ ನೀಡಲಾಗಿದೆ. ಸ್ವೀಕಾರ, ಸಂಸ್ಕಾರ, ಆವಿಷ್ಕಾರ ಮತ್ತು ಪರಿಷ್ಕಾರದ ತತ್ವಗಳು ನೀತಿಯಲ್ಲಿ ಒಳಗೊಂಡಿದೆ ಎಂದು ಎಬಿಆರ್‌ಎಸ್‌ಎಂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರೊ. ಶಿವಾನಂದ ಸಿಂಧನಕೆರಾ ಅವರು ಹೇಳಿದರು.

ಜಿ.ಎಂ. ವಿಜಯಕುಮಾರ, ಜಂಟಿ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಮಾತನಾಡುತ್ತ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮಗುವಿನ ಎಲ್ಲ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ಶಿಕ್ಷಣ ನೀತಿಯನ್ನು ಪ್ರೀತಿಯಿಂದ ಅಪ್ಪಿಕೊಂಡು ನವಭಾರತ ನಿರ್ಮಾಣಕ್ಕೆ ಕಾರಣ ಆಗೋಣ ಎಂದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯರಾದ ಶ್ರೀ ಶಶೀಲ್ ನಮೋಶಿ, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯಾಧ್ಯಕ್ಷರಾದ ಸಂದೀಪ ಬೂದಿಹಾಳ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಪಿ ಯು ಕಾಲೇಜ್ ಪ್ರಾಚಾರ್ಯರಾದ ಶ್ರೀಶೈಲ, ವಿಭಾಗ ಪ್ರಮುಖ ಮಹೇಶ ಬಸರಕೋಡ, ಅಧ್ಯಕ್ಷರಾದ ಚಂದ್ರಶೇಖರ್ ಪಾಟೀಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂಜುಕುಮಾರ ಪಾಟೀಲ್ ಪಾಲ್ಗೊಂಡರು. ಜಿಲ್ಲೆಯ ವಿವಿಧ ಶಾಲೆ, ಕಾಲೇಜುಗಳ ಮುಖ್ಯಶಿಕ್ಷಕರು, ಪ್ರಾಂಶುಪಾಲರು ಕೂಡ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

●

# ಗುರು–ಶಿಷ್ಯ



**ಲಕ್ಷ್ಮೀಸಿಂಗ್ ಬಿ.**
**ಶೈಕ್ಷಣಿಕ ಸಮಾಲೋಚಕರು**
**ಲೈಫ್ ಕೋಚ್**
**ಲಕ್ಷ್ಮೀ ಕೋಚಿಂಗ್ ಸೆಂಟರ್**

"ಮನೆಯೇ ಮೊದಲ ಪಾಠಶಾಲೆ. ತಾಯಿಯೇ ಮೊದಲ ಗುರು." ಇಲ್ಲಿ ಜೀವ ಕೊಟ್ಟ ತಾಯಿಯನ್ನು ಗುರುವಿಗೆ ಹೋಲಿಸಿದ್ದಾರೆ. ಅಂದರೆ, ತಾಯಿ ಮತ್ತು ಗುರು ಇಬ್ಬರಲ್ಲೂ ಯಾವುದೇ ಅಂತರವಿಲ್ಲ. ತಾಯಿ ಜೀವ ಕೊಡುತ್ತಾಳೆ. ಗುರು ಜೀವನ ಕೊಡುತ್ತಾನೆ.

"ಗುರು ಬ್ರಹ್ಮ, ಗುರು ವಿಷ್ಣು, ಗುರುದೇವೋ ಮಹೇಶ್ವರಃ, ಗುರುಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀ ಗುರುವೇ ನಮಃ" ಎಂದು ಪ್ರಾರಂಭವಾಗುವ ಗುರುಸ್ತುತಿಯನ್ನು ತಿಳಿಯದವರು ಇಲ್ಲವೇ ಇಲ್ಲ ಎಂದೇ ಹೇಳಬಹುದು.

'ಗುರು' ಎಂದರೇನು ಕತ್ತಲೆಯಿಂದ ಬೆಳಕಿನ ಕಡೆಗೆ ಕರೆದೊಯ್ಯುವವನು. ಇಂತಹ ಗುರುವಿನ ಮಹತ್ವವನ್ನು ಅರಿತವನೇ ನಿಜವಾದ ಶಿಷ್ಯ. ಕೇವಲ ಶ್ರೇಷ್ಠತೆಯನ್ನು ಅರಿತು ಗೌರವಿಸುವಂತವನಾಗಬೇಕು. ಗುರು ಶಿಷ್ಯರ ಸಂಬಂಧ ಬಹಳ ಉತ್ಕೃಷ್ಟವಾದುದು. ಅವರಿಬ್ಬರದು ಒಂದು ಅವಿನಾಭಾವ ಸಂಬಂಧ. ಆದರೆ ಈ ಸಂಬಂಧದ ಅರ್ಥ ಈಗ ಬದಲಾಗಿದೆ ಮತ್ತು ಬದಲಾಗುತ್ತಿದೆ.


ಗುರು ಶಿಷ್ಯರ ಮಧ್ಯೆ ಬಹಳ ಅಂತರ ಉಂಟಾಗಿದೆ. ಗುರು ಈಗ ಅಕ್ಷರ ಜ್ಞಾನವನ್ನು ಕೊಡುವ ಶಿಕ್ಷಕನಾಗಿದ್ದಾನೆ. ಶಿಷ್ಯ ಆ ಅಕ್ಷರ ಜ್ಞಾನ ಕಲಿತು ಅಂಕಗಳನ್ನು ಗಳಿಸುವ ಯಂತ್ರವಾಗಿದ್ದಾನೆ. ಜ್ಞಾನ ಸಂಪಾದನೆ ಶೂನ್ಯವಾಗಿದೆ.

ಈ ಎಲ್ಲಾ ಬದಲಾವಣೆಗಳಿಗೆ ನಮ್ಮ ಸಮಾಜವೇ ಹೊಣೆ 'Modern Education' ಎಂಬ ಹೆಸರಿನಲ್ಲಿ ಗುರು–ಶಿಷ್ಯರ ಪರಂಪರೆ ಬದಲಾಗಿ ಶಿಕ್ಷಕ, ವಿದ್ಯಾರ್ಥಿ ಪರಂಪರೆ ಬೆಳೆಯುತ್ತಿದೆ. 'ಗುರು' ಎಂಬ ಪದದ ಅರ್ಥ ಕಳೆದುಕೊಂಡಿದೆ. 'ಗುರು' – ಶಿಷ್ಯರ ಸಂಬಂಧ ವ್ಯಾಪರೀಕರಣವಾಗಿದೆ. 'ಗುರು' ಅಕ್ಷರ ಶಿಕ್ಷಣ ಕೊಟ್ಟ ಜೀವನದ ಮಾರ್ಗೋಪಾಯಗಳನ್ನು ಹೇಳಿಕೊಡುವ ಮಾಧ್ಯಮವಾಗಿದ್ದಾನೆ. ಶಿಷ್ಯ ಅಕ್ಷರಗಳನ್ನು ಕಲಿತು, ಅಂಕ ಗಳಿಸಿ ಧನಸಂಪಾದನೆ ಮಾಡುವ ಸಾಧನವಾಗಿದ್ದಾನೆ. ಜ್ಞಾನದ ಮಾನದಂಡ ಈಗ ವಿದ್ಯಾರ್ಥಿ ಗಳಿಸುವ ಅಂಕಗಳು ಆಗಿವೆ. ಯಾವ ಗುರು, ತನ್ನ ಶಿಷ್ಯನಿಗೆ ಜೀವನದ ಶ್ರೇಷ್ಠತೆಯನ್ನು ಕಲಿಸದೆ ಹಣ ಮತ್ತು ಅಧಿಕಾರ ಬಲ ಗಳಿಸುವಷ್ಟು ಮಟ್ಟಿಗೆ ವಿದ್ಯೆ ಧಾರೆಯೆರೆಯುತ್ತಾನೆಯೋ ಅವನೇ ಈಗ ಉತ್ಕೃಷ್ಟ ಗುರು.

ದ್ರೋಣಾಚಾರ್ಯ– ಅರ್ಜುನ, ಚಾಣಕ್ಯ– ಚಂದ್ರಗುಪ್ತ ಮತ್ತು ರಾಮಕೃಷ್ಣ ಪರಮಹಂಸ– ವಿವೇಕಾನಂದ ಇಂತಹ ಗುರು–ಶಿಷ್ಯರ ಅನುಬಂಧ ಈಗ ಕಾಣದಾಗಿದೆ. ಈಗಲಾದರೂ ನಾವು ಎಚ್ಚೆತ್ತುಕೊಳ್ಳಬೇಕು. ಇಲ್ಲದಿದ್ದರೆ ಯುವ ಪೀಳಿಗೆಯಲ್ಲಿ ಕನಿಷ್ಠ ಮಟ್ಟದ ಸಾಮಾನ್ಯ ಜ್ಞಾನವು ಇಲ್ಲದಂತಾಗುತ್ತದೆ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬ ನುಡಿಯಂತೆ ಶಿಷ್ಯ, ಗುರುವಿಗೆ ವಿಧೇಯಕನಾಗಿ 'ವಿನಯವೇ ವಿದ್ಯೆಗೆ ಭೂಷಣ' ಎಂಬ ಮಾತು ಸತ್ಯವಾಗುವಂತೆ ಗುರುವಿನ ಮಹತ್ವ ಅರಿವಾಗುವಂತೆ ಮಾಡಬೇಕು. ಇದು ನಮ್ಮೆಲ್ಲರ ಜವಾಬ್ದಾರಿ ಕೂಡ. ಗುರು ಕೇವಲ ಜ್ಞಾನ ಕೊಡುವ ಮಾಧ್ಯಮವಲ್ಲ. ಅವನಿಗೆ ಒಂದು ಸಾಮ್ರಾಜ್ಯವನ್ನೇ ಕಟ್ಟುವಷ್ಟು ಸಾಮರ್ಥ್ಯ ಇರುತ್ತದೆ ಎಂದು ನಮ್ಮ ಇತಿಹಾಸದ ಉದಾಹರಣೆಗಳ ಮೂಲಕ ಮನದಟ್ಟು ಮಾಡಬೇಕು. ಮೌರ್ಯವಂಶ ಕಟ್ಟಿದ ಚಾಣಕ್ಯ, ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದ ವಿದ್ಯಾರಣ್ಯರಂತಹ ಮಹನೀಯರ ಪರಿಚಯ ಮಾಡಿಸಬೇಕು.

ತಾಯಿ ಮಗುವಿಗೆ ಜೀವಕೊಟ್ಟು ಒಂದು ಮನೆಯನ್ನು ಬೆಳಗಿದರೆ, ಗುರು ಮಕ್ಕಳಿಗೆ ಜೀವನವನ್ನು ಕೊಟ್ಟು ಒಂದು ಸಮಾಜವನ್ನು ಕಟ್ಟಿ ಪ್ರಜ್ವಲಿಸುತ್ತಾನೆ ಎಂಬುದರ ಅರಿವು ಶಿಷ್ಯರಲ್ಲಿ ಮೂಡಬೇಕು.


ಗುರುಗಳಾದ ನಾವು ಕೂಡ ಅಜ್ಞಾನವನ್ನು ನಿವಾರಣೆ ಮಾಡಿ ಸುಜ್ಞಾನವನ್ನು ಕೊಡುವ ದೀವಿಗೆಗಳಾಗಬೇಕು. ಕೇವಲ ಮಿದುಳಿಗೆ ಶಿಕ್ಷಣ ನೀಡುವ ಶಿಕ್ಷಕರಾಗದೆ, ಹೃದಯಕ್ಕೆ ಶಿಕ್ಷಣ ನೀಡುವ ಗುರುವಾಗಬೇಕು. ಗುರುತತ್ವಕ್ಕೆ ಮಣಿಯುವಂತ ಕೆಲಸಗಳನ್ನು ಮಾಡಬೇಕು. ಗುರು– ಶಿಷ್ಯ ಪರಂಪರೆ ಬೆಳೆಯುವುದಕ್ಕೆ ನಾಂದಿಯಾಗಬೇಕು.



**"ಅರಿವೇ ಗುರು, ಗುರುವೇ ಸರ್ವಜ್ಞ"**

# ಪ್ರಿಪರೇಟರಿ ಪರೀಕ್ಷೆ ಎದುರಿಸುವಾಗಿನ ಮನೋಭಾವ

ಜಿ. ಕೆ. ವೆಂಕಟೇಶ ಮೂರ್ತಿ




ಕೆಲವು ವರ್ಷಗಳ ಹಿಂದೆ ಕಾರವಾರದಲ್ಲಿ ಒಬ್ಬರು ಡಿಸ್ಟ್ರಿಕ್ಟ್ ಜಡ್ಜ್ ಇದ್ದರು. ಅವರು ಒಮ್ಮೆ ತಮ್ಮ ಪದೋನ್ನತಿಗಾಗಿ (Promotion) ಪರೀಕ್ಷೆ ಎದುರಿಸಲು ಬೆಂಗಳೂರಿಗೆ ಹೋಗಿ ಬಂದರು. ಹಿಂತಿರುಗಿದ ನಂತರ ಹೇಳಿದರು "ನನ್ನ ಪರೀಕ್ಷೆ ಚೆನ್ನಾಗಿ ಆಗಲಿಲ್ಲ, ನನಗೆ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಗೊತ್ತಿತ್ತು. ಆದರೆ ಅವುಗಳನ್ನು ಸಮಯಕ್ಕೆ ಸರಿಯಾಗಿ ಬರೆಯಲು ನನ್ನ ಕೈ ಸಹಕರಿಸಲಿಲ್ಲ. ನನ್ನ ಕೈಗೆ ಬರೆಯುವುದೆಂದರೆ ಕೇವಲ ಸಹಿ ಹಾಕುವ ಅಭ್ಯಾಸ ಮಾತ್ರ ಇತ್ತು!'

ನಮಗೆ ಮನೆಯಲ್ಲಿದ್ದಾಗ ಮೂರು ತಾಸು ಒಂದೇ ಕಡೆ ಕೂಡುವ ಅಭ್ಯಾಸವೇ ಇರುವುದಿಲ್ಲ. (ಕ್ಷಮಿಸಿ, ಕೈಯಲ್ಲಿ ಸ್ಮಾರ್ಟ್‌ಫೋನ್ ಇದ್ದಾಗ ಅಥವಾ ಎದುರಿಗೆ ಟಿ.ವಿ ಚಾಲೂ ಇದ್ದಾಗ– ಇವರೆಡನ್ನು ಹೊರತುಪಡಿಸಿ). ಆದರೆ ಪರೀಕ್ಷೆಯಲ್ಲಿ ನಾವು ಒಂದೆಡೆ ಮೂರು ತಾಸು ಕುಳಿತಿರಬೇಕಾಗುತ್ತದೆ. ಸುಮ್ಮನೆ ಕುಳಿತಿದ್ದರೆ ಸಾಲದು, ಮನಸ್ಸು ಉತ್ತರಗಳನ್ನು ಯೋಚಿಸುತ್ತಾ ಇರಬೇಕು ಮತ್ತು ಕೈ ನಿರಂತರವಾಗಿ ಉತ್ತರಗಳನ್ನು ಬರೆಯುತ್ತಿರಬೇಕು. ಕೈಗೂ ಹಾಗೆ ಸತತವಾಗಿ ಬರೆಯುವ ಅಭ್ಯಾಸ ಇರುವುದಿಲ್ಲ. ಎಷ್ಟೋ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಕೈ ಸಹಕರಿಸದಿದ್ದಾಗ ಅಲ್ಲೇ ಲಟಿಕೆ ತೆಗೆದು ಹೋಗ ಮಾಡಲು ಪ್ರಾರಂಭಿಸುತ್ತಾರೆ!

ಕಳೆದ ವರ್ಷ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಲು ಭಟ್ಕಳಕ್ಕೆ ಹೋಗಿದ್ದೆ. ಅಲ್ಲಿ ಐ.ಸಿ.ಎಸ್.ಇ ವಿದ್ಯಾರ್ಥಿಗಳೂ ಇದ್ದರು. ಆ ಕೆಲವು ವಿದ್ಯಾರ್ಥಿಗಳು ಕೇಳಿದರು. 'ಸರ್, ನಮಗೆ 10 ಅಂಕದ ಒಂದು ಪ್ರಶ್ನೆ ಇರುತ್ತದೆ. ಅದಕ್ಕೆ ಎರಡೂವರೆ ಪುಟ ಉತ್ತರ ಬರೆಯಬೇಕಾಗುತ್ತದೆ, ಏನು ಮಾಡೋದು?' (ನಮ್ಮ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳೇ ಅದೃಷ್ಟವಂತರು ಎಂದು ನನಗನ್ನಿಸಿತು). ಅವರಿಗೆ ವೇಗ ಬರಹದ ಕೆಲವು ಉಪಾಯಗಳನ್ನು ತಿಳಿಸಿದ ಮೇಲೆ ಒಂದು ಮೂಲ ಮಂತ್ರವನ್ನು ಹೇಳಿದೆ 'ಪ್ರಾಕ್ಟೀಸ್, 'ಪ್ರಾಕ್ಟೀಸ್ ಆ್ಯಂಡ್ 'ಪ್ರಾಕ್ಟೀಸ್.

ಇನ್ನೇನು ಪ್ರಾರಂಭವಾಗುತ್ತದೆ ಪ್ರಿಪರೇಟರಿ ಪರೀಕ್ಷೆಗಳು. ಅವುಗಳನ್ನು ಎದುರಿಸುವಾಗಿನ, ಮನೋಭಾವ ಹೇಗಿರಬೇಕು? 'ಶಾಲೆಯೋ, ಶಿಕ್ಷಣ ಸಂಸ್ಥೆಯೋ, ಏರ್ಪಡಿಸುತ್ತದೆ. ನಾವು ಬರೆಯಬೇಕು' ಎಂದು ಭಾವಿಸಬಾರದು. 'ನಾವು ಎಷ್ಟು ಕಲಿತಿದ್ದೇವೆ?' ಎಂದು ಸ್ವ–ಮೌಲ್ಯಮಾಪನ (self estimation) ಮಾಡಿಕೊಳ್ಳಲು ಇದೊಂದು ಅವಕಾಶ ಎಂದು ಭಾವಿಸಬೇಕು. ಮುಂದಿನ ಮುಖ್ಯವಾದ ಬೋರ್ಡ್ ಪರೀಕ್ಷೆಗಾಗಿ ನಾವೇ ಮಾಡಿಕೊಳ್ಳುತ್ತಿರುವ 'ರಿಹರ್ಸಲ್' ಎಂದು ಭಾವಿಸಬೇಕು. ಇಂತಹ ಒಂದು ಅವಕಾಶ ಕಲ್ಪಿಸಿರುವ ಶಾಲೆ ಹಾಗೂ ಶಿಕ್ಷಣ ಇಲಾಖೆಗೆ ಮನಸ್ಸಿನಲ್ಲೇ ಒಂದು ಥ್ಯಾಂಕ್ಸ್ ಹೇಳಬೇಕು. ಈ ಅವಕಾಶವನ್ನು ಮಾಡಿಕೊಳ್ಳಬೇಕು.

ಪ್ರತಿ ಪ್ರಿಪರೇಟರಿ ಪರೀಕ್ಷೆ ಆದ ಮೇಲೆ ಅದರಲ್ಲಿನ ನಮ್ಮ ನಿರ್ವಹಣೆಯನ್ನು ವಿಶ್ಲೇಷಿಸಿಕೊಳ್ಳಬೇಕು–'ನನ್ನಿಂದ ಏನೇನು ತಪ್ಪಾಯಿತು? ಅದು ಏಕಾಯಿತು? ನನ್ನನ್ನು ನಾನು ಹೇಗೆ ತಿದ್ದಿಕೊಳ್ಳಬೇಕು?' ಎಂದು. ಹೀಗೆ ಮಾಡದಿದ್ದರೆ ಮತ್ತೆ ಮತ್ತೆ ಅದೇ ತಪ್ಪುಗಳಾಗುತ್ತಿರುತ್ತವೆ. ●


## ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ ಪತ್ರಿಕೆಯ ಪ್ರಾರೂಪ

(ಪ್ರಾರೂಪ 8, ವಿಧಿ 8)

| | |
|---|---|
| ಪ್ರಕಟಣೆಯ ಸ್ಥಳ | : ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಪ್ರಕಾಶಕ | : ಜಿ. ಎಂ. ಜೋಶಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.) |
| ಮಾಲೀಕತ್ವ | : ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ.) ನಂ.55, ಯಾದವಸ್ಮೃತಿ, 1ನೇ ಮುಖ್ಯರಸ್ತೆ, ಬೆಂಗಳೂರು–560020 |
| ಸಂಪಾದಕ | : ಜಿ. ಎಂ. ಜೋಶಿ (ಮೇಲಿನದೇ ವಿಳಾಸ) |
| ಭಾರತದ ಪ್ರಜೆಯೇ | : ಹೌದು |
| ಮುದ್ರಕ | : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು – 560 019 |

ಮೇಲೆ ಕೊಟ್ಟಿರುವ ವಿಷಯಗಳು ನನ್ನ ನಂಬಿಕೆಯಲ್ಲಿ ಪೂರ್ಣ ಸತ್ಯವೆಂದು ನಾನು ಘೋಷಿಸುತ್ತೇನೆ.

ಬೆಂಗಳೂರು (ಸಹಿ) ಜಿ. ಎಂ. ಜೋಶಿ
1.3.2021 ಪ್ರಕಾಶಕ

# ವಿದ್ಯಾರ್ಥಿ ಜ್ಞಾನ ಮಿತ್ರ

# ಭಾರತ ಪರಿಚಯ

ಜೆ. ಎಂ. ಜೋಶಿ
ರಾಜ್ಯ ಕೋಶಾಧ್ಯಕ್ಷರು
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ



ಮೋಕ್ಷದಾಯಕ ಸಪ್ತ ನಗರಗಳಾದ ಅಯೋಧ್ಯೆ, ಮಥುರಾ, ಹರಿದ್ವಾರ, ಕಾಶಿ, ಕಂಚಿ, ಉಜ್ಜಯನಿ ಮತ್ತು ದ್ವಾರಕಾ ಇವು ಭಾರತದ ಪವಿತ್ರ ತೀರ್ಥ ಕ್ಷೇತ್ರಗಳು. ಇವುಗಳಲ್ಲಿ, ಅಯೋಧ್ಯೆಯ ಬಗ್ಗೆ ನಾವೀಗ ಸಂಕ್ಷಿಪ್ತವಾಗಿ ತಿಳಿಯೋಣ.

ಚಕ್ರವರ್ತಿ ಮನುವಿನಿಂದ ಅಯೋಧ್ಯೆ ನಗರವು ನಿರ್ಮಿಸಲ್ಪಟ್ಟಿತು ಎಂದು ರಾಮಾಯಣದಲ್ಲಿ ಉಲ್ಲೇಖವಿದೆ. ಸೂರ್ಯ ವಂಶದ ಶ್ರೇಷ್ಠ ಚಕ್ರವರ್ತಿ ದಿಲೀಪನು 'ವಿಶ್ವಜಿತ್' ಯಜ್ಞವನ್ನು ನಡೆಸಿದ ಪುಣ್ಯಕ್ಷೇತ್ರ. ಇದು ರಾಜಾ ರಘುವಿನ ರಾಜಧಾನಿಯಾಗಿತ್ತು. ವಸಿಷ್ಠ ಮಹರ್ಷಿಗಳ ಸಲಹೆಯಂತೆ ದಶರಥ ಚಕ್ರವರ್ತಿಯು ಋಷ್ಯಶೃಂಗರ ನೇತೃತ್ವದಲ್ಲಿ 'ಪುತ್ರಕಾಮೇಷ್ಠಿ' ಯಾಗವನ್ನು ನಡೆಸಿದ ಫಲವಾಗಿ ಸ್ವತಃ ಭಗವಂತನೇ ದಶರಥ ಸುತನಾಗಿ ಜನ್ಮತಾಳಿದನು, ಅವನೇ ಪ್ರಭು ಶ್ರೀರಾಮಚಂದ್ರ.

ಪವಿತ್ರವಾದ ಅಯೋಧ್ಯೆ ನಗರವು ಸರಯೂ ನದಿ ತೀರದಲ್ಲಿದೆ. ಆಳವಾಗಿ, ಅಗಲವಾಗಿ ಹರಿಯುವ ಸರಯೂ ಬಹಳ ಧನ್ಯ. ಅಯೋಧ್ಯೆ ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯಲ್ಲಿತ್ತು. ಈಗ ಅಂದರೆ 2018ರಿಂದ ಅಯೋಧ್ಯೆಯನ್ನು ಜಿಲ್ಲೆಯನ್ನಾಗಿ ಘೋಷಿಸಿದರು, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರು. ಇದು ಭಾರತೀಯರಾದ ನಮಗೆಲ್ಲ ಹೆಮ್ಮೆಯ ವಿಷಯ.

1528ರಲ್ಲಿ ಬಾಬರ್ ಅಯೋಧ್ಯೆಯ ಮೇಲೆ ಆಕ್ರಮಣ ನಡೆಸಿ, ರಾಮ ಜನ್ಮ ಸ್ಥಾನ ಮಂದಿರವನ್ನು ನಾಶಗೊಳಿಸಿ ಮಸೀದಿಯನ್ನು ನಿರ್ಮಿಸಿದ್ದನು. ನಿರಂತರ ಸಂಘರ್ಷದ ಫಲವಾಗಿ ಕೊನೆಗೂ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ರಾಷ್ಟ್ರಪುರುಷ ಶ್ರೀರಾಮನ ಜನ್ಮಸ್ಥಾನ ಮುಕ್ತವಾಗಿದೆ. ಅಲ್ಲಿ ಭವ್ಯರಾಮ ಮಂದಿರ ನಿರ್ಮಾಣಕ್ಕಾಗಿ ಸಿದ್ಧತೆ ನಡೆಯುತ್ತಿದೆ. ಇಂತಹ ದೈವೀ ಪುರುಷನ ಹೆಮ್ಮೆಯ ನಗರ ಮನುಕುಲದ ಮೊದಲ ರಾಜಧಾನಿ ಅಯೋಧ್ಯೆಗೆ ಶತಶತ ನಮನಗಳು.

**ಈ ಪ್ರಶ್ನೆಗಳಿಗೆ ಉತ್ತರಗಳನ್ನು ಓದುಗರು kssta55@gmail.com ಮೂಲಕ ಕಳುಹಿಸುವುದು. ಸರಿಯಾದ ಉತ್ತರವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

## ಒಂದಿಷ್ಟು ಇತಿಹಾಸ

1. ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ನೀಡಿದ 'ವಂದೇ ಮಾತರಂ' ಗೀತೆ ಬರೆದವರು ಯಾರು?
2. ಅನುಭವ ಮಂಟಪದ ಮೊದಲ ಕಾರ್ಯದರ್ಶಿ ಯಾರಾಗಿದ್ದರು?
3. ಶಂಕರಾಚಾರ್ಯರು ಯಾವ ಮತವನ್ನು ಪ್ರತಿಪಾದಿಸಿದರು?
4. ನಮ್ಮ ಭಾರತ ದೇಶವನ್ನು ಮೊದಲು ಏನೆಂದು ಕರೆಯುತ್ತಿದ್ದರು?
5. ನಾಲ್ವಡಿ ಕೃಷ್ಣರಾಜ ಒಡೆಯರನ್ನು ರಾಜರ್ಷಿ ಎಂದು ಯಾರು ಕರೆಯುತ್ತಿದ್ದರು?

## ಜ್ಞಾನ ವಿಜ್ಞಾನ

1. ನಮ್ಮ ಭಾರತದ ಗೋಧಿಯ ಕಣಜ ಎಂದು ಪ್ರಸಿದ್ಧವಾದ ರಾಜ್ಯ ಯಾವುದು?
2. ನಮ್ಮ ಕರ್ನಾಟಕದ ಈಗಿನ ರಾಜ್ಯಪಾಲರು ಯಾರು?
3. ಗುರುತ್ವಾಕರ್ಷಣೆಯನ್ನು ಯಾರು ಕಂಡು ಹಿಡಿದರು?
4. ಭೂಕಂಪಗಳ ತೀಕ್ಷ್ಣತೆಯನ್ನು ಅಳೆಯುವ ಸಾಧನ ಯಾವುದು?
5. ಪ್ರಾಚೀನ ವೈದ್ಯ ಪದ್ಧತಿಯ ಹೆಸರೇನು?

## ಜನವರಿ ಸಂಚಿಕೆಯ ಉತ್ತರಗಳು

**ಒಂದಿಷ್ಟು ಇತಿಹಾಸ – ಉತ್ತರಗಳು**

1. ಬಂಕಿಮಚಂದ್ರ ಚಟರ್ಜಿ
2. ಚನ್ನಬಸವಣ್ಣ
3. ಅದ್ವೈತ
4. ಹಿಂದೂಸ್ಥಾನ
5. ಮಾರ್ಕ್‌ಕಬ್ಬನ್

**ಜ್ಞಾನ–ವಿಜ್ಞಾನ – ಉತ್ತರಗಳು**

1. ಪಂಜಾಬ್
2. ಶ್ರೀವಜುಭಾಯ್ ವಾಲಾ
3. ಸರ್ ಐಸಾಕ್ ನ್ಯೂಟನ್
4. ಸಿಸ್ಮೋಗ್ರಾಫ್
5. ಆಯುರ್ವೇದ

# ರಾಜ್ಯದ ವಿವಿಧೆಡೆ ಸಂಘದ ಸದಸ್ಯತ್ವ ಅಭಿಯಾನ

ಪ್ರತಿ ವರ್ಷವು ಶಾಲಾ ಕಾಲೇಜುಗಳ ಪ್ರಾರಂಭದ ಅವಧಿ, ಜೂನ್ ಜುಲೈ ತಿಂಗಳಲ್ಲಿ ಸದಸ್ಯತ್ವ ಅಭಿಯಾನ ನಡೆಯುತ್ತಿತ್ತು. ಈ ವರ್ಷ ಕೋವಿಡ್–19ರ ಕಾರಣಕ್ಕಾಗಿ ಸದಸ್ಯತ್ವ ಅಭಿಯಾನ ಆ ತಿಂಗಳಲ್ಲಿ ನಡೆಯುವುದಿಲ್ಲ. ಅದಕ್ಕಾಗಿ ಮಾರ್ಚ್17, 2021ರಂದು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಒಂದು ದಿನದ ಸದಸ್ಯತ್ವ ಅಭಿಯಾನವನ್ನು ಮಾಡುವುದು ಎಂದು ಸಂಘದ ಕೋರ್‌ಕಮಿಟಿ ನಿರ್ಧರಿಸಿದಂತೆ ರಾಜ್ಯದಲ್ಲಿ ಪೂರ್ವ ಮತ್ತು ಯೋಜನಾ ಬದ್ಧವಾಗಿ ತಯಾರಿಯನ್ನು ಮಾಡಲಾಗಿತ್ತು. ಅಂದು ಬೆಳಿಗ್ಗೆ 8–30ರಿಂದ ಪ್ರಾರಂಭವಾದ ಸದಸ್ಯತ್ವ ಅಭಿಯಾನ ಸಂಜೆಯವರೆಗೂ ನಡೆಯಿತು ಮತ್ತು ಈ ಮಹಾ ಸದಸ್ಯತ್ವ ಅಭಿಯಾನದಲ್ಲಿ ಪಾಲ್ಗೊಂಡ ಎಲ್ಲ ಕಾರ್ಯಕರ್ತರಿಗೂ ವಿಶೇಷ ಅನುಭವವಾಯಿತು. ಅನೇಕ ಶಾಲೆಗಳಲ್ಲಿ ತುಂಬಾ ಪ್ರೀತಿಯಿಂದ ಬರಮಾಡಿಕೊಂಡು ಸದಸ್ಯತ್ವ ಪಡೆದರು. ಅನೇಕ ಕಡೆಗಳಲ್ಲಿ ಶಿಕ್ಷಕರು ಶೈಕ್ಷಣಿಕ ಮತ್ತು ಶಿಕ್ಷಕ ಸಮಸ್ಯೆಗಳ ಚರ್ಚೆ ಮಾಡಿದರು. ಅನೇಕರು ಸದಸ್ಯತ್ವಕ್ಕಾಗಿ ಬಂದ ಕಾರ್ಯಕರ್ತರಿಗೆ ಸನ್ಮಾನ ಮಾಡಿ ಕಳಿಸಿದರೆ ಮತ್ತೆ ಕೆಲವು ಕಡೆಗೆ ಮಧ್ಯಾಹ್ನದ ಊಟ ಮಾಡಿಸಿ ಕಳಿಸಿದರು. ಕೋವಿಡ್–19 ಸಂಕಷ್ಟದ ಕಾಲದಲ್ಲಿ ಶಿಕ್ಷಕರ ಮನದಲ್ಲಿ ಸಂಘದ ಬಗ್ಗೆ ಇರುವ ಮನೋಭಾವ, ಅರಿವು ಅನೇಕ ಕಾರ್ಯಕರ್ತರಿಗಾಯಿತು.

ರಾಷ್ಟ್ರೀಯ ಮನೋಭಾವ ಸೇವಾ ಕಾರ್ಯವೇ ಪ್ರಮುಖ ಉದ್ದೇಶವಾಗಿಟ್ಟುಕೊಂಡು ಶೈಕ್ಷಣಿಕ ಮತ್ತು ಶಿಕ್ಷಕರ ಒಳಿತು ಚಿಂತನೆಯನ್ನು ಒಳಗೊಂಡಿರುವ ಮಾಧ್ಯಮಿಕ ಶಿಕ್ಷಕ ಸಂಘದ ಅವಶ್ಯಕತೆ ಇದೆ ಎಂದು ಅನೇಕ ಯುವ ಶಿಕ್ಷಕರು ಹೇಳಿದ್ದು ಸಂಘದ ಕಾರ್ಯಕರ್ತರಿಗೆ ಪ್ರೇರಣಾದಾಯಕವಾಗಿತ್ತು. ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಸದಸ್ಯತ್ವದ ಅಭಿಯಾನದ ಯಶಸ್ವಿಗೆ ಕಾರಣರಾದರು.

ಈ ಅಭಿಯಾನದ ಸಂದರ್ಭದಲ್ಲಿ ಸಂಘದ ಹಿರಿಯರಾದ ಬಾಲಕೃಷ್ಣಭಟ್‌ಜಿ ಚಾಮರಾಜನಗರದಲ್ಲಿ, ಪ್ರಧಾನ ಕಾರ್ಯದರ್ಶಿಗಳಾದ ಶಿವಾನಂದ ಸಿಂಧನಕೇರಾಜಿ ಮೈಸೂರಿನಲ್ಲಿ, ಬೆಂಗಳೂರಿನಲ್ಲಿ ಹಿರಿಯರಾದ ಸೀತಾಲಕ್ಷ್ಮಿಜಿ, ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಚಿದಾನಂದ ಪಾಟೀಲ, ಖಜಾಂಚಿಗಳಾದ ಜೆ.ಎಂ ಜೋಷಿ, ಮಂಡ್ಯದಲ್ಲಿ ಸ.ಪ್ರ.ಕಾ ಗಂಗಾಧರ ಆಚಾರಿ, ಧಾರವಾಡದಲ್ಲಿ ರೋಹಿಣಿ ನಾಯ್ಕ, ಚಿತ್ರದುರ್ಗದಲ್ಲಿ ಕಾರ್ಯದರ್ಶಿಯರಾದ ವೃಷಬೇಂದ್ರ ಸ್ವಾಮಿ, ಬಳ್ಳಾರಿಯಲ್ಲಿ ಆರ್ ಕೊಟ್ರಪ್ಪ, ಗುಂಡಾಚಾರ್, ಕಲಬುರ್ಗಿಯಲ್ಲಿ ಮಹೇಶ ಬಸರಕೋಡ್, ಗದಗದಲ್ಲಿ ಸಂದೀಪ್ ಬೂದಿಹಾಳ್, ಹಾವೇರಿಯಲ್ಲಿ ಓಲೇಕಾರ ಹೀಗೆ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ರಾಜ್ಯ ಪದಾಧಿಕಾರಿಗಳಲ್ಲದೆ ಅಲ್ಲಿಯ ಜಿಲ್ಲಾ ಅಧ್ಯಕ್ಷರು ಮತ್ತು ಉಳಿದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ತಂಡ ಮಹಾ ಅಭಿಯಾನದಲ್ಲಿ ತೊಡಗಿರುವುದು ವಿಶೇಷವಾಗಿತ್ತು. ಈ ವರ್ಷ ಪ್ರತ್ಯಕ್ಷವಾಗಿ ಶಾಲೆಗಳಲ್ಲಿ ಹೋಗಿ ಸದಸ್ಯತ್ವ ಮಾಡುತ್ತಿರುವುದಲ್ಲದೆ ಆನ್‌ಲೈನ್ ಸದಸ್ಯತ್ವ ಅಭಿಯಾನವು ನಡೆಯುತ್ತಿದೆ. ಇದು ಮಾರ್ಚ್2021 ರ ಕೊನೆಯವರೆಗೆ ನಡೆಯುತ್ತಿದ್ದು ಈ ವರ್ಷ ಕೋವಿಡ್–19ರ ಸಂಕಷ್ಟದ ಸ್ಥಿತಿಯಲ್ಲಿಯು ಸದಸ್ಯತ್ವದಲ್ಲಿ ಉತ್ಸಾಹ ತುಂಬಿದೆ.



MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-03-2021
Date of Posting 20th or 21st of every month
Posted at Periodical Rate

# ರಾಷ್ಟ್ರೀಯ ಕಾರ್ಯಕಾರಿಣಿ – ಒಂದು ವರದಿ



"ನಾವು ಹಿಂದೂಗಳು, ಸೆಕ್ಯುಲರ್‌ಗಳು ಅಲ್ಲ. ಸೆಕ್ಯುಲರ್ ಎಂಬ ಪದದ ಅನುವಾದವನ್ನು ಭಾರತದ ಯಾವ ಭಾಷೆಯಲ್ಲಿಯೂ ಮಾಡಬಾರದು. ಅದರ ಅವಧಾರಣೆಯೂ ಭಾರತದ್ದಲ್ಲ. ನನ್ನ ಧರ್ಮವೇ ಶ್ರೇಷ್ಠ ಎಂದು ನಂಬುವವರು ಭಾರತೀಯರಲ್ಲ. ಸಂವಿಧಾನ ಮಾಡುವಾಗಲೂ ಸೆಕ್ಯುಲರ್ ಪದದ ಉಪಯೋಗವಾಗಬೇಕೇ ಎಂದು ಚರ್ಚೆಯಾಯಿತು. ಆದರೆ ಸಂವಿಧಾನದಲ್ಲಿ ಆ ಶಬ್ದದ ಉಪಯೋಗ ಮಾಡಬಾರದೆಂದು ತೀರ್ಮಾನಿಸಲಾಯಿತು" ಎಂದು ದಿನಾಂಕ **30.01.2021** ಮತ್ತು **31.01.2021** ರಂದು ಗುಜರಾತಿನಲ್ಲಿ ನಡೆದ ಎ.ಬಿ.ಆರ್.ಎಸ್.ಎಮ್.ನ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರಕಾರ್ಯವಾಹರಾದ ಶ್ರೀ ಮನಮೋಹನ್ ವೈದ್ಯಜೀಯವರು ಅಭಿಪ್ರಾಯಪಟ್ಟರು.

ಎರಡು ದಿನಗಳ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ **18** ರಾಜ್ಯಗಳ ಪ್ರಮುಖ ಪದಾಧಿಕಾರಿಗಳು ಭಾಗವಹಿಸಿದ್ದರು. ಮೊದಲನೇ ದಿನದಂದು ಎ.ಬಿ.ಆರ್.ಎಸ್.ಎಮ್.ನ ಅಧ್ಯಕ್ಷರಾದ ಶ್ರೀ ಜೆ. ಪಿ. ಸಿಂಘಾಲ್ ಜಿಯವರು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ವಿವರವಾಗಿ ಹೇಳಿದರು. ಇಲ್ಲಿಯವರೆಗೆ ಮೆಕಾಲೆ ಶಿಕ್ಷಣ ಇತ್ತು. ಭಾರತ ಸ್ವಾತಂತ್ರ್ಯ ನಂತರದ ಅವಧಿಯಲ್ಲಿಯಾದರು ಭಾರತೀಯ ಶಿಕ್ಷಣ ನೀಡುವುದೇ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಗುರಿಯೆಂದು ಹೇಳಿದರು.

ಕಾರ್ಯಕಾರಿಣಿಯಲ್ಲಿ ಭಾಗವಹಿಸಿದ ಪ್ರತಿನಿಧಿಗಳು ತಮ್ಮ ತಮ್ಮ ರಾಜ್ಯದಲ್ಲಿ ನಡೆದ ಕಾರ್ಯಕ್ರಮಗಳ ವರದಿಯನ್ನು ಸಭೆಗೆ ನೀಡಿದರು. ತಮ್ಮ ತಮ್ಮ ಶಾಲೆಗಳಲ್ಲಿ ಮಾಡುತ್ತಿರುವ ಹೊಸ ಹೊಸ ಪ್ರಯೋಗಗಳ ಬಗ್ಗೆಯೂ ಸಭೆಗೆ ಮಾಹಿತಿ ನೀಡಿದರು.

"ಮೇರಾ ವಿದ್ಯಾಲಯ–ಮೇರಾ ತೀರ್ಥ" ಎಂಬ ಕಾರ್ಯಕ್ರಮವನ್ನು ದೇಶದ ಎಲ್ಲಾ ರಾಜ್ಯಗಳಲ್ಲೂ ಅಳವಡಿಸಿಕೊಳ್ಳಬೇಕೆಂದು ಎ.ಬಿ.ಆರ್.ಎಸ್.ಎಮ್. ನ ಸಂಘಟನಾ ಮಂತ್ರಿಗಳಾದ ಶ್ರೀ ಮಹೇಂದ್ರ ಕಪೂರ್ ರವರು ತಿಳಿಸಿದರು.

ಸಂಘಟನೆಯ ಮುಂದಿನ ಕಾರ್ಯಕ್ರಮಗಳ ಬಗ್ಗೆಯೂ ಕಾರ್ಯಕಾರಿಣಿಯಲ್ಲಿ ಚರ್ಚೆಯಾಯಿತು. ಮುಂದಿನ ನಿರ್ದಿಷ್ಟ ಕಾರ್ಯಕ್ರಮಗಳ ಬಗ್ಗೆಯೂ ಸೂಚನೆ ನೀಡಲಾಯಿತು.

ಕಾರ್ಯಕಾರಿಣಿಯಲ್ಲಿ **http:/news.abrsm.in** ಅನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರಕಾರ್ಯವಾಹರಾದ ಶ್ರೀ ಮನಮೋಹನ್ ವೈದ್ಯಜೀಯವರು ಉದ್ಘಾಟನೆ ಮಾಡಿದರು.

ಕಾರ್ಯಕಾರಿಣಿಯಲ್ಲಿ ಒಟ್ಟು **18** ರಾಜ್ಯಗಳಿಂದ **112** ಸದಸ್ಯರು ಹಾಜರಾಗಿದ್ದರು. ಕರ್ನಾಟಕದಿಂದ ಎ.ಬಿ.ಆರ್.ಎಸ್.ಎಮ್. ನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಾನಂದ ಸಿಂಧನಕೇರಾರವರು, ಮಧ್ಯಕ್ಷೇತ್ರಿಯ ಸಂಘಟನಾ ಪ್ರಮುಖರಾದ ಶ್ರೀ ಬಾಲಕೃಷ್ಣ ಭಟ್‌ರವರು, ಮಹಿಳಾ ವಿಭಾಗ ಸಂಯುಕ್ತ ಸಚಿವರಾದ ಶ್ರೀಮತಿ ಮಮತಾ ಡಿ.ಕೆ., ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀ ಸಂದೀಪ್ ಬೂದಿಹಾಳ್, ಪ್ರಧಾನ ಕಾರ್ಯದರ್ಶಿಗಳಾದ ಶ್ರಿ ಚಿದಾನಂದ್ ಕೆ. ಪಾಟೀಲ್, ಸಹ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಗಂಗಾಧರ್ ಆಚಾರ್ಯರವರು, ಮಹಿಳಾ ವಿಭಾಗದ ಪ್ರಮುಖರಾದ ಶ್ರೀಮತಿ ವಾಸುಕಿಯವರು ಭಾಗವಹಿಸಿದ್ದರು.

**ಗಮನಿಸಿ**

**ಶಿಕ್ಷಕ ಸಮಾಚಾರದ ಹೊಸ ಸಂಚಿಕೆಯ ಬಗ್ಗೆ ಅನಿಸಿಕೆ, ಅಭಿಪ್ರಾಯಗಳನ್ನು ಪ್ರತಿ ಸಂಚಿಕೆ 5ನೇ ತಾರೀಖಿನೊಳಗೆ akss1950@gmail.com Emailಗೆ ಕಳುಹಿಸಿಕೊಡಿ. ಉತ್ತಮ ಅನಿಸಿಕೆ, ಅಭಿಪ್ರಾಯವನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.**

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com